





ನೀರಿಲ್ಲದೆ ಒಣಗುತ್ತಿದ್ದ ಬೇಲಿ ಮೇಲಿನ ಬಳ್ಳಿಗೆ ನೀರುಣಿಸಿದಾಗ ಆ ಬಳ್ಳಿ ಚಿಗುರಿ ಅಲ್ಲಿ ನೂರಾರು ಹೂ ಹುಟ್ಟಿ ಚೆಲುವಾದಂತೆ ಈ ಕಂದಮ್ಮಗಳ ನುಡಿಗಳು ಇವೆ. ಇದರೊಳಗೊಂದು ನುಡಿ ಹೀಗಿದೆ 'ಮನೇಲಿ ಇದ್ದಿದ್ರೆ ಈಗ್ಲೂ, ಅಪ್ಪ ಅಮ್ಮ ಕುರಿ ಕಾಯಿಸ್ತಿದ್ರು, ಅಲ್ಲಿ ಇದ್ದಾಗ ಅದೇ ಸುಖ, ಇಲ್ಲಿ ಇದ್ದಾಗ ಇದೇ ಸುಖ ಅಲ್ವ ಸಾರ್' ಬಿ.ಟಿ.ಪರಶುರಾಮ, ೫ನೇ ತರಗತಿ, ಕುರ್ಕಿಬುಳ್ಳಾಪುರ, ಕುರಿ ಕಾಯುವುದು. ಈ ಮನಸ್ಸು ನನ್ನನ್ನು ಸುಮಾರು ಕಾಲ ಹಿಡಿದಿಟ್ಟಿತು. ಶ್ರಮ, ದುಡಿಮೆಯನ್ನು ಆನಂದವಾಗಿಸಿಕೊಂಡ ಮನಸ್ಸು ಇದು. ಅಕ್ಷರ ವಿದ್ಯಾವಂತರಾದವರು ನಿರುದ್ಯೋಗಿಗಳಾಗುತ್ತ ತ್ಯಾಜ್ಯವಸ್ತುವಿನಂತೆ ಭಾರವಾಗಿರುವ ಇಂದಿನ ಪರಿಸ್ಥಿತಿಯಲ್ಲಿ ಶ್ರಮ ದುಡಿಮೆ ಕುಶಲತೆಗಳನ್ನೂ ಆನಂದಾಟವಾಗಿಸಿ ಅಕ್ಷರ ವಿದ್ಯೆಯ ಭಾಗವಾಗಿಸುವುದು ಇಂದಿನ ಅಗತ್ಯವಾಗಿದೆ. ಶ್ರಮ ದುಡಿಮೆಯ ಹಿನ್ನೆಲೆಯ ಮಕ್ಕಳು ಅಕ್ಷರ ವಿದ್ಯೆ ಕಲಿಯುವಾಗ ಶ್ರಮ ದುಡಿಮೆಯನ್ನು ಕೀಳಾಗಿ ನೋಡದಂತೆಯೂ ಎಚ್ಚರ ವಹಿಸಬೇಕಾಗಿದೆ. ಜಾತಿ ಪದ್ಧತಿಯ ಕಾರಣದಿಂದಾಗಿ ದುಡಿಮೆಗೆ ಶೋಷಣೆ ಅವಮಾನಗಳು ಮಿಳಿತಗೊಂಡು ಶುಚಿತ್ವ ಕಾಯಕವನ್ನೇ ಕೀಳಾಗಿ ನೋಡುವ ಅಶುಚಿ ಮನಸ್ಸು ನಮ್ಮ ಸಮಾಜದ್ದಾಗಿದೆ. ಹಾಗಾಗಿ, ಕಸಗುಡಿಸುವುದು, ಚಪ್ಪಲಿ ರಿಪೇರಿ ಕಲಿಕೆಯು ಭಾರತದ ಅಂತರ್ಯವನ್ನು ವಿಶಾಲಗೊಳಿಸುವ ವಿದ್ಯೆಯೂ ಆಗಬಹುದು ಈ ಮಾತನ್ನು ಗಾಂಧಿ ಆಡುತ್ತಿದ್ದರೇನೊ.

ದೇವನೂರ ಮಹಾದೇವ



ಯುನಿಸೆಫ್‌ನೊರಾಡ್ ಯೋಜನೆ ದಾವಣಗೆರೆ.



# ಮಕ್ಕಳ ಮಾತು

ಪುನರ್ವಸತಿ ಹೊಂದಿದ ಬಾಲ ಕಾರ್ಮಿಕರ ಮಾತುಗಳು



## ಸ್ಟ್ರೀಟ್ ಚಿಲ್ಡ್ರನ್

ಅನೇಕಾನೇಕ ಸಂಕಟಗಳು
ಜೀವನವ ಹಿಂಡಿ ಹಿಪ್ಪೆ ಮಾಡಿರುವಾಗ
ಬದುಕುವುದೇ ಕೊನೆಯ ಸಮಸ್ಯೆ
ಯಾರಿಗೆ ಯಾರೂ ಏನೂ ಆಗದಿರುವಾಗ
ಸ್ವಂತ ರಕ್ತದಲ್ಲೆ ಪರಕೀಯತೆ.
ತಿಪ್ಪೆಗುಂಡಿ ಮೇಲೆ ಹಾಕಿಕೊಂಡ
ಶಾಪಗ್ರಸ್ಥ ಬಾಲ್ಯ - ಬೀದಿಮಕ್ಕಳು
ಬದುಕನ್ನು ಹುಡುಕಿಕೊಳ್ಳಲು
ಸೂರ್ಯೋದಯಕ್ಕೆ ಸಲಾಂ ಹೊಡೆದು
ಅವರು ಹೊರಡುತ್ತಾರೆ -
ಹೆಗಲಚೀಲದಲಿ ಬದುಕಭಾರ ಹೊರುತ್ತ.

ಅಕ್ಷರಗಳ ತಿದ್ದಬೇಕಾದ ಬಾಲ್ಯ
ರದ್ದಿ ಪೇಪರಿನಲ್ಲಿ ಸಿಕ್ಕಿಕೊಂಡಿದೆ
ಹಾಲು ಕುಡಿಯಬೇಕಾದ ಹಸುಳೆಯ ಶೈಶವ್ಯ
ಹಾಲಿನ ಕವರುಗಳ ಬೇಟಿಯಲ್ಲಿ ಕೈಜಾರಿ ಹೋಗಿದೆ.
ಯಾವ ಅಮಾವಾಸ್ಯೆ ಅವರ ಬೀದಿಪಾಲು ಮಾಡಿಹಾಕಿತೋ?

ಬಿಸಿಲೇನು ಮಳೆಯೇನು ?
ಚಳಿಯೇನು... ಸೆಕೆಯೇನು ?
ಹಗಲೇನು... ರಾತ್ರಿಯೇನು ?
ಕಾಲದ ಪರಿವೇ ಇಲ್ಲ
ಕೇಳುವವರೂ ಯಾರೂ ಇಲ್ಲ.

ಕೇವಲ ಬದುಕಲಿಕ್ಕಾಗಿ
ಎಷ್ಟೊಂದು ಯುದ್ಧಗಳ ಮಾಡುತ್ತಾರವರು
ಎಷ್ಟು ಸಲ ಗಾಯಗೊಳ್ಳುತ್ತಾರೆ ಗೊತ್ತಾ ?
ತಿಪ್ಪೆಗುಂಡಿಯಿಂದ ವಸ್ತುಗಳ ಹೊರತೆಗೆದು
ಪ್ರೀತಿಯಿಂದ ಚೀಲದಲಿ ಹಾಕಿಕೊಳ್ಳುತ್ತಿರುವ
ಅವರ ನೋಡುತ್ತಿದ್ದರೆ
ಪ್ರಾಚ್ಯವಸ್ತು ಸಂಶೋಧಕರು ನೆನಪಾಗುತ್ತಾರೆ

ಅವರು ನಡೆಯುತ್ತಿದ್ದರೆ
ಆತ್ಮಸ್ಥೈರ್ಯವೇ ಸಾಕಾರವಾದಂತೆ ಭಾಸವಾಗುತ್ತದೆ.

- ಮಹೆಜಬೀನ್

ಕನ್ನಡ ಅನುವಾದ : ಚಿದಾನಂದ ಸಾಲಿ

# ಮಕ್ಕಳ ಮಾತು

ಪುನರ್ವಸತಿ ಹೊಂದಿದ ಬಾಲ ಕಾರ್ಮಿಕರ ಮಾತುಗಳು


ಸಂಯೋಜನೆ :

ಗೋಪಾಡ್ಕರ್
ಕೆ.ರಾಘವೇಂದ್ರ ಭಟ್
ಈ.ಧನಂಜಯ

ಪ್ರಕಟಣೆ :

ಜಿಲ್ಲಾಡಳಿತ, ಯುನಿಸೆಫ್-ನೊರ್ಾಡ್ ಯೋಜನೆ
ಮತ್ತು ಕಾರ್ಮಿಕ ಇಲಾಖೆ, ದಾವಣಗೆರೆ.





**MAKKALA MATHU :** A collection of rehabilitated children's voice against child labour, published by Unicef-Norad Child Labour Elimination Project, Davanagere.

ಮೊದಲ ಆವೃತಿ : ಜುಲೈ-2006

ಪ್ರತಿಗಳು : 1000

ಪುಟ : 48

ಹಕ್ಕುಗಳು : ಯುನಿಸೆಫ್ / ನೊರಾಡ್ ಯೋಜನೆ, ದಾವಣಗೆರೆ.

ಸಲಹಾವಂತಿಗೆ : ರೂ.25/-

ಪ್ರಕಟಣೆ : ಜಿಲ್ಲಾಡಳಿತ, ಯುನಿಸೆಫ್- ನೊರಾಡ್ ಬಾಲ ಕಾರ್ಮಿಕ
ಪದ್ಧತಿ ನಿರ್ಮೂಲನಾ ವಿಶೇಷ ಕ್ರಿಯಾ ಯೋಜನೆ ಮತ್ತು
ಕಾರ್ಮಿಕ ಇಲಾಖೆ ಜಿಲ್ಲಾಧಿಕಾರಿಗಳ ಕಛೇರಿ, ದಾವಣಗೆರೆ - 577002
ದೂರವಾಣಿ - 08192 -256459

ವಿನ್ಯಾಸ : ಪ್ರಕಾಶ್ ಚಿಕ್ಕಪಾಳ್ಯ, ಮೈಸೂರು.

ಚಿತ್ರ : ಟಿ. ಆರ್. ಕರುಣ, ಮೈಸೂರು.

ಡಿ.ಟಿ.ಪಿ : ಅಮ್ಮಣ್ಣಿ ಡಿ.ಟಿ.ಪಿ.ಕೇಂದ್ರ, ಮೈಸೂರು.

ಮುದ್ರಣ : ಗುಡ್‌ಟಚ್, ಮೈಸೂರು.
ದೂರವಾಣಿ : (0821) 2512626

ಸಹಕಾರ : ಬೆಳಕು, ಗುರಿ, ಡಾನ್‌ಬಾಸ್ಕೊ, ಸೇಂಟ್‌ಜಾನ್ಸ್, ಸೀಡ್ಸ್ ಮತ್ತು ದಲಿತ ಮಹಾ ಸಭಾ, ದಾವಣಗೆರೆ.



# ಮುನ್ನುಡಿ

ಬಾಲ ಕಾರ್ಮಿಕ ಪದ್ಧತಿ ಒಂದು ಸಾಮಾಜಿಕ ಪಿಡುಗಾಗಿ ಪರಿಣಮಿಸುತ್ತಿದ್ದು ಇದರಿಂದ ಅನಕ್ಷರತೆ, ಜನಸಂಖ್ಯೆ, ನಿರುದ್ಯೋಗ ಹಾಗು ಬಡತನ ಹೆಚ್ಚಾಗುತ್ತಿರುವುದು ಒಂದು ವಿಷಾದದ ಸಂಗತಿಯಾಗಿದೆ. ಶಿಕ್ಷಣದಿಂದ ವಂಚಿತರಾಗಿ ದುಡಿಯುತ್ತಿರುವ ಎಲ್ಲಾ ಮಕ್ಕಳಿಗೂ ಕನಿಷ್ಟ ಹತ್ತನೇ ತರಗತಿ ತನಕ ಶಿಕ್ಷಣ ದೊರತರೆ, ಇನ್ನೊಬ್ಬರ ಮೋಸ, ವಂಚನೆಗೆ ಬಲಿಯಾಗದೆ ಈ ಸಮಾಜದಲ್ಲಿ ಪ್ರಜ್ಞಾವಂತರಾಗಿ ಬದುಕಬಹುದು. ಅದಕ್ಕಾಗಿಯಾದರು ಮಕ್ಕಳನ್ನು ಶಾಲೆಗೆ ಕಳುಹಿಸಿ ಶಿಕ್ಷಣ ಕೊಡಿಸಬೇಕೆಂಬ ಅರಿವು ಪೋಷಕ ಬಂಧುಗಳಲ್ಲಿ ಬಂದರೆ ಅದಕ್ಕಿಂತ ದೊಡ್ಡ ಕೊಡುಗೆಮತ್ತೊಂದಿಲ್ಲ.

ಈ ನಿಟ್ಟನಲ್ಲಿ ಯುನಿಸೆಫ್ ನೊರಾಡ್ ಬಾಲಕಾರ್ಮಿಕಪದ್ಧತಿ ನಿರ್ಮೂಲನಾ ವಿಶೇಷ ಕ್ರಿಯಾ ಯೋಜನೆಯು ಕರ್ನಾಟಕ ಸರಕಾರದ ಸಹಭಾಗಿತ್ವದಲ್ಲಿ ಒಂದು ಮಾದರಿ ಯೋಜನೆಯಾಗಿ ದಾವಣಗೆರೆ ತಾಲ್ಲೂಕನ್ನು ಕಾರ್ಯಕ್ಷೇತ್ರವನ್ನಾಗಿ ಆಯ್ಕೆ ಮಾಡಿಕೊಂಡು ಸಮುದಾಯಕ್ಕೆ ಬಾಲಕಾರ್ಮಿಕಪದ್ಧತಿ ಬಗ್ಗೆ ಜಾಗೃತಿ ಮೂಡಿಸುತ್ತಾ, ದುಡಿಯುತ್ತಿರುವಮಕ್ಕಳನ್ನು ಬಿಡಿಸಿ, ಮುಖ್ಯವಾಹಿನಿಗೆ ದಾಖಲಿಸುವಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ. ವಿವಿಧ ಚಟುವಟಿಕೆಗಳನ್ನು ನಡೆಸುತ್ತ ಕ್ರಿಯಾತ್ಮಕವಾಗಿ ಕಾರ್ಯನಿರ್ವಹಿಸುತ್ತಿರುವ ಯೋಜನೆಯ ಸಂಯೋಜನಾಧಿಕಾರಿ ರಾಘವೇಂದ್ರ ಭಟ್ ಅವರು ಮಕ್ಕಳಮಾತುಗಳು ಎಂಬ ಈ ಪುಸ್ತಕವನ್ನು ಹೊರತರುವಪ್ರಯತ್ನ ಮಾಡಿರುವುದು ಮೆಚ್ಚುವಂಥದ್ದು.

## ನನ್ನದೊಂದು ಮಾತು

ಯುನಿಸೆಫ್ - ನೊರಾಡ್ ಬಾಲಕಾರ್ಮಿಕ ಪದ್ಧತಿ ನಿರ್ಮೂಲನಾ ವಿಶೇಷ ಕ್ರಿಯಾ ಯೋಜನೆಯು ಜಿಲ್ಲಾಡಳಿತದ ಸಹಭಾಗಿತ್ವದಲ್ಲಿ ಕಳೆದ ಮೂರು ವರ್ಷಗಳಿಂದ ದಾವಣಗೆರೆ ತಾಲ್ಲೂಕಿನಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಶಾಲೆಯಿಂದ ಹೊರಗುಳಿದ ೧೪ ವರ್ಷದೊಳಗಿನ ಮಕ್ಕಳಿಗೆ ಶಿಕ್ಷಣ ದೊರಕಿಸುವ ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ. ವಿವಿಧ ಕ್ಷೇತ್ರಗಳಲ್ಲಿ ದುಡಿಯುತ್ತಿದ್ದ ಮಕ್ಕಳನ್ನು ದುಡಿಮೆಯಿಂದ ಬಿಡಿಸಿ ಅವರಿಗೆ ಪುನರ್ವಸತಿ ಕಲ್ಪಿಸಿ ಶಿಕ್ಷಣ ನೀಡಿ ಮುಖ್ಯವಾಹಿನಿಗೆ ದಾಖಲಿಸಲಾಗಿದೆ.

ಮಕ್ಕಳು ತಮ್ಮ ಬಾಲ್ಯವನ್ನೇ ಕಳೆದುಕೊಂಡು ಮತ್ತೊಬ್ಬರ ಹಂಗಿನಲ್ಲಿ ದುಡಿಯುವಾಗ ಅನುಭವಿಸುವ ನೋವು ಹೇಳತೀರದು. ಪೋಷಕರ ಅಜ್ಞಾನದಿಂದಲೋ, ಮಾಲೀಕರ ಆಮಿಷಕ್ಕೊಳಗಾಗಿಯೋ, ಶಾಲಾ ಶಿಕ್ಷಣದಲ್ಲಿನ ಅವ್ಯವಸ್ಥೆಯಿಂದಲೋ ಅಥವಾ ಶಿಕ್ಷಕರ ವರ್ತನೆಯಿಂದಲೋ ಬೇಸತ್ತು ಮಕ್ಕಳು ಶಾಲೆ ಬಿಡುತ್ತಾರೆ. ನಂತರ ಎಳೆಯ ವಯಸ್ಸಿನಲ್ಲಿ ದುಡಿಮೆಗೆ ತೊಡಗಿಸಿಕೊಂಡು, ಮುಂದೆ ಈ ಸಮಾಜಕ್ಕೆ ಅನಕ್ಷರಸ್ತರಾಗಿ ಬರುತ್ತಾರೆ. ಅದರ ಪರಿಣಾಮ ಬಡತನ, ಅನಕ್ಷರತೆ, ನಿರುದ್ಯೋಗ ಹಾಗು ಜನಸಂಖ್ಯೆ ಹೆಚ್ಚಾಗುತ್ತದೆ. ಇಂದಿನ ಮಕ್ಕಳೆಲ್ಲರಿಗೂ ಶಿಕ್ಷಣ ದೊರಕಿದರೆ ಇಂತಹ ಸಾಮಾಜಿಕ ಪಿಡುಗುಗಳನ್ನು ಹೋಗಲಾಡಿಸಿ ಸಮ ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯ ಎಂಬ ನಿಟ್ಟಿನಲ್ಲಿ ಯೋಜನೆಯು ಒಂದು ಮಾದರಿ ಯೋಜನೆಯಾಗಿ ಕೆಲಸ ನಿರ್ವಹಿಸಿದೆ.

ಹೀಗೆ ಕೆಲಸ ನಿರ್ವಹಿಸುವಾಗ ತಜ್ಞ ಸಂಪನ್ಮೂಲ ವ್ಯಕ್ತಿಗಳನ್ನು ಯೋಜನೆಗೆ ಪರಿಚಯಿಸಿ ವಿವಿಧ ಚಟುವಟಿಕೆಗಳನ್ನು ಕೈಗೊಳ್ಳುವ ಹಂತದಲ್ಲಿ ಕಲಾವಿದರಾದ ಗೋಪಾಡ್ಕರ್ ಅವರು ನಮ್ಮ ಪುನರ್ವಸತಿ ಕೇಂದ್ರದಲ್ಲಿ ಆಶ್ರಯಪಡೆದ ಮಕ್ಕಳನ್ನು ಮಾತನಾಡಿಸಿ ಅವರ ಅಭಿಪ್ರಾಯಗಳನ್ನು ಕೇಳಿದಾಗ ಮಕ್ಕಳು ಆ ತತ್‌ಕ್ಷಣ ಆಡಿದ ಅಂತರಾಳದ ಮಾತುಗಳ ಸಂಗ್ರಹವೇ ಒಂದು ತರಬೇತಿ

ಇಲ್ಲಿರುವ ಮಾತುಗಳನ್ನು ಓದಿದಾಗ ಒಂದೊಂದು ಮಗುವಿನ ಮಾತೂ ಸಹ ಆಳವಾದ ಅರ್ಥವನ್ನು ಹೊಂದಿದ್ದು, ಮಕ್ಕಳ ಹಕ್ಕುಗಳು ಉಲ್ಲಂಘನೆ ಯಾಗುತ್ತಿರುವುದರ ಬಗ್ಗೆ ಸಮಾಜವನ್ನು ಜಾಗೃತಿಗೊಳಿಸುವ ಅಂಶಗಳಾಗಿವೆ. ಮಕ್ಕಳ ಬಾಲ್ಯವನ್ನು ಉಳಿಸಿ, ಬೆಳೆಸಬೇಕಾದ ಜವಾಬ್ದಾರಿ ಸಮಾಜದ ಕೈಯಲ್ಲಿದೆ. ಸರಕಾರ ಕೈಗೊಳ್ಳುವ ಯೋಜನೆಗಳಿಗೆ ಸಮುದಾಯದ ಸಹಕಾರ ಅತ್ಯಗತ್ಯ. ಆಗ ಮಾತ್ರ ಸಮಾಜದಲ್ಲಿ ಬದಲಾವಣೆ ತರಲು ಸಾಧ್ಯ. ಎಲ್ಲಾ ಮಕ್ಕಳಿಗೂ ಅವರ ಬಾಲ್ಯವನ್ನು ಅನುಭವಿಸಲು ಬಿಟ್ಟು, ಅವರ ಹಕ್ಕುಗಳನ್ನು ಅವರಿಗೆ ನೀಡಿ, ಮಕ್ಕಳಿಗೆ ಕಡ್ಡಾಯ ಶಿಕ್ಷಣ ಕೊಡಿಸುವುದು ಎಲ್ಲಾ ಪೋಷಕರ ಆದ್ಯ ಕರ್ತವ್ಯವಾಗಲಿ, ಎಲ್ಲಾ ಮಕ್ಕಳಿಗೂ ಮೂಲಭೂತ ಶಿಕ್ಷಣ ದೊರಕಲಿ ಎಂದು ಆಶಿಸುತ್ತೇನೆ.

ಮಲ್ಲಿಕಾರ್ಜುನ.ಬಿ.ದ್ಯಾಬೇರಿ
ಜಿಲ್ಲಾಧಿಕಾರಿಗಳು,
ದಾವಣಗೆರೆ ಜಿಲ್ಲೆ, ದಾವಣಗೆರೆ

ಕೈಪಿಡಿಯಂತೆ ಮೂಡಿ, ಇಂದು ನಿಮ್ಮ ಕೈಯಲ್ಲಿದೆ. ಈ ಮಾತುಗಳನ್ನು ಕೇಳಿದ ಮೇಲೆ ಬಾಲ್ಯವನ್ನು ಕಳೆದುಕೊಂಡು ಶಿಕ್ಷಣದಿಂದ ವಂಚಿತರಾಗಿ ಶೋಷಣೆಗೊಳಗಾಗುತ್ತಿರುವ ಮಕ್ಕಳ ರಕ್ಷಣೆಗಾಗಿ ನೀವು ಸಹ ಮತ್ತಷ್ಟು ಕೈ ಜೋಡಿಸಿದರೆ ಆ ಮಕ್ಕಳ ಬದುಕಿಗೊಂದು ಅರ್ಥ ಬಂದೀತು.

ಈ ಯೋಜನೆ ಅನುಷ್ಠಾನಗೊಂಡ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಕೆ. ಶಿವರಾಮು ಅವರು, ನಂತರ ಬಂದಂತಹ ಶ್ರೀ ಶಶಿಧರ್, ಶ್ರೀ ರವಿಶಂಕರ್ ಹಾಗೂ ಈಗಿನ ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಬಿ. ದ್ಯಾಬೇರಿ ಅವರು ಯೋಜನೆಗೆ ಉತ್ತಮ ಸಹಕಾರ ನೀಡಿ ಮುನ್ನಡಿಸಿದ್ದಾರೆ. ಜಿಲ್ಲಾ ಕಾರ್ಮಿಕ ಅಧಿಕಾರಿಗಳಾದ ಶ್ರೀ ಸಿ. ಹೆಚ್. ಹಿರೇಗೌಡರ್‌ರವರ ಮಾರ್ಗದರ್ಶನ, ಪೂರಕವಾಗಿ ಜಿಲ್ಲಾ ಪಂಚಾಯತ್, ಕಾರ್ಮಿಕ ಇಲಾಖೆ, ಪೊಲೀಸ್ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗು ಶಿಕ್ಷಣ ಇಲಾಖೆಗಳು ಹೆಚ್ಚಿನ ಸಹಕಾರ ನೀಡಿವೆ. ಯೋಜನೆಯೊಡನೆ ತೊಡಗಿಸಿಕೊಂಡಿರುವ ಸ್ವಯಂ ಸೇವಾ ಸಂಸ್ಥೆಗಳಾದ ಬೆಳಕು, ಗುರಿ, ಸೀಡ್ಸ್, ಸೇಂಟ್ ಜಾನ್ಸ್, ಡಾನ್ ಬಾಸ್ಕೊ ಮತ್ತು ಡಿ.ಎಂ.ಎಸ್.ಸಂಸ್ಥೆಗಳ ನಿರ್ದೇಶಕರು, ಸಂಯೋಜಕರು ಹಾಗು ಸಿಬ್ಬಂದಿಗಳು ಆಸಕ್ತಿಯಿಂದ ಕೆಲಸ ನಿರ್ವಹಿಸುತ್ತಿರುವುದನ್ನು ನೆನೆಯಲೇಬೇಕು. ಯೋಜನೆಯ ಲೆಕ್ಕಾಧಿಕಾರಿಗಳಾದ ಶ್ರೀ ಎಚ್. ಕೆ. ಬಸವರಾಜು ಅವರ ಸಹಕಾರದೊಂದಿಗೆ ಈ ಯೋಜನೆಯ ಯಶಸ್ಸಿನಲ್ಲಿ ಅನೇಕ ಸಂಪನ್ಮೂಲ ವ್ಯಕ್ತಿಗಳು, ಅಧಿಕಾರಿಗಳು, ಇಲಾಖೆಗಳು, ಜನಪ್ರತಿನಿಧಿಗಳು, ಗ್ರಾಮ ಪಂಚಾಯತ್, ಶಾಲಾ ಶಿಕ್ಷಕರು, ಮಹಿಳಾ ಸಂಘಗಳು, ಯುವಕ ಸಂಘಗಳು, ಪ್ರೇರಕರು, ಎಸ್.ಡಿ.ಎಂ.ಸಿ., ಅಂಗನವಾಡಿ ಸಿಬ್ಬಂದಿಗಳು ಹಾಗು ಸಮುದಾಯ ಪ್ರಮುಖ ಪಾತ್ರವಹಿಸಿ ತೊಡಗಿಸಿಕೊಂಡಿರುವುದು ಆದರ್ಶನೀಯ.

ಕೆ.ರಾಘವೇಂದ್ರ ಭಟ್
ಸಂಯೋಜನಾಧಿಕಾರಿ
ಯುನಿಸೆಫ್ - ನೊರಾಡ್ ಯೋಜನೆ

## ಆಶಯ ನುಡಿ

ಇಲ್ಲಿಯ ಮಕ್ಕಳದ್ದೆಲ್ಲ ಒಂದೊಂದೇ ಮಾತು... ಒಡಲಾಳದ ನೋವಿನ ಮಿಡಿತದ್ದು. ಈ ಪುಟ್ಟ ಪುಟ್ಟ ಮಾತುಗಳಲ್ಲಿ ಕುಟುಂಬ - ತಾಯ್ತಂದೆ, ಶಾಲೆ - ಮೇಷ್ಟ್ರುಗಳು, ದುಡಿತ - ಮಾಲೀಕರು,ಎಲ್ಲರ ಕ್ರೂರತನಗಳನ್ನು ತೆರೆದಿಟ್ಟು, ದಿಕ್ಕರಿಸಿ ಸ್ವಾತಂತ್ರ್ಯಪ್ರೇಮವನ್ನು, ಘನತೆಯುಳ್ಳ ಬಾಳನ್ನು ಅರಸಿಕೊಳ್ಳುತ್ತವೆ, ಈ ಪುಟ್ಟ ಪುಟ್ಟ ಕಂದಮ್ಮಗಳು.

ಈ ಎಲ್ಲಾ ಕುಡಿಗಳ ಅಂತರಂಗದ ಬಯಕೆಗಳೂ.... 'ಎಲ್ಲರೂ ತಮ್ಮನ್ನು ಪ್ರೀತಿಸಬೇಕು, ಅವಮಾನಿಸಬಾರದು, ಗೌರವದ ಮಾನ್ಯತೆ ನೀಡಬೇಕು' ಇದು ಯಾವುದೇ ಜೀವದ ಸರ್ವಕಾಲದ ನಿರಂತರ ನಿರೀಕ್ಷೆ..

ಬಹುಶಃ ಈ ಮಕ್ಕಳ ಬಹಳ ದೊಡ್ಡ ಸೌಭಾಗ್ಯ... ಇವರನ್ನೆತ್ತಿ ಪ್ರೀತಿಯಿಂದ ಕಲಿಸಿ ವಿದ್ಯಾವಂತರನ್ನಾಗಿಸುವ ಈ ಸಂಸ್ಥೆ, ಈ ತಂಡ ಇರೋದು.... ಈ ಸೌಭಾಗ್ಯವಿಲ್ಲದ ಮಕ್ಕಳ ಗತಿ !

ಡಾ. ಲತಾ ಮೈಸೂರು
(ಕವಯಿತ್ರಿ)

## ಮಾತು ಕೇಳುವ ಮುನ್ನ

ಇಲ್ಲಿನ ಮಾತುಗಳು ಯಾವುದೋ ದಾರ್ಶನಿಕರ ಅಥವ ತತ್ವಜ್ಞಾನಿಗಳ ಮಾತುಗಳಲ್ಲ. ತಮ್ಮ ಬಾಲ್ಯವನ್ನೇ ಕಳೆದುಕೊಂಡು ಒಂದಲ್ಲ ಒಂದು ದುಡಿಮೆಗೆ ತೊಡಗಿಸಿಕೊಂಡಿದ್ದ ಮಕ್ಕಳು ತಮ್ಮ ಅನುಭವದ ಅನಿಸಿಕೆಗಳನ್ನು ತಮ್ಮದೇ ಧಾಟಿಯಲ್ಲಿ ಹೇಳಿಕೊಂಡಿದ್ದಾರೆ. ಇವರೆಲ್ಲ ಈಗ ಬಾಲಕಾರ್ಮಿಕ ಪದ್ಧತಿಯಿಂದ ಮುಕ್ತಿ ಪಡೆದು ಮುಖ್ಯವಾಹಿನಿಯಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ.

ಪೋಷಕರ ನಿರ್ಲಕ್ಷ್ಯ, ಮಾಲೀಕರ ದೌರ್ಜನ್ಯ, ಶಿಕ್ಷಕರ ಬೇಜವಾಬ್ದಾರಿತನ ಹಾಗೂ ತನ್ನ ಕುಟುಂಬದಿಂದ ಅನುಭವಿಸಿದ ಅನಿವಾರ್ಯ ಪರಿಸ್ಥಿತಿಗಳ ಕುರಿತು ಎಳೆಯ ಕರುಳ ಬಳ್ಳಿಗಳ ಹೃದಯಾಂತರಾಳದಿಂದ ಹೊರಬಂದ ಈ ಮಾತುಗಳು ಕೇವಲ ಮಾತುಗಳಲ್ಲ. ಪೋಷಕರಾಗಿ, ಬಂಧುಗಳಾಗಿ, ಮಾಲೀಕರಾಗಿ, ಶಿಕ್ಷಕರಾಗಿ, ಈ ಸಮಾಜದ ಜವಾಬ್ದಾರಿ ವ್ಯಕ್ತಿಯಾಗಿ ಮಕ್ಕಳ ಶಿಕ್ಷಣದ ಬಗ್ಗೆ ಎಚ್ಚರವಹಿಸಿ, ಅವರಿಗೆ ಶಿಕ್ಷಣ ಕೊಡಿಸಿ, ಅವರ ಬಾಲ್ಯವನ್ನು ಅನುಭವಿಸಲು ಅವಕಾಶ ಕಲ್ಪಿಸಿಕೊಡಬೇಕೆಂದು ಎಚ್ಚರಿಸಿರುವ ಅಮೃತ ಬಿಂದುಗಳಾಗಿವೆ.

ದುಡಿಮೆ, ಮನೆ, ಕಾಡು-ಮೇಡು, ಶಾಲೆ ಹೀಗೆ ಏನೆಲ್ಲ ಕಡೆ ಆ ಎಳೆಯ ವಯಸ್ಸಿನಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರೋ ಅಲ್ಲಿನ ನೋವು-ನಲಿವುಗಳನ್ನು ತಮ್ಮದೇ ಆದ ಮುಗ್ಧ ಮಾತುಗಳಲ್ಲಿ ತಕ್ಷಣ ಅವರಿಗನಿಸಿದ್ದನ್ನು ನೇರವಾಗಿ ನುಡಿದಿದ್ದಾರೆ. ಶಿಕ್ಷಣಕ್ಕೆ ತೊಡಗಿಸಿಕೊಂಡಮೇಲೆ ಹಿಂದೆ ಮತ್ತು ಈಗ ಅವರಲ್ಲಿ ಆಗಿರುವ ಬದಲಾವಣೆಗಳ ಬಗ್ಗೆ ಶಾಲೆ, ಶಾಲಾ ಶಿಕ್ಷಕರು ಹೇಗಿದ್ದರು ? ಹೇಗಿರಬೇಕೆಂಬ ಬಗ್ಗೆಯೂ ತಿಳಿಸಿದ್ದಾರೆ.

ಮಕ್ಕಳ ಈ ಮಾತುಗಳನ್ನು ಕೇಳಿದ ಮೇಲೆ ಅವರ ಆಕಾಂಕ್ಷೆಗಳಿಗೆ ಮನ್ನಣೆ ನೀಡಬೇಕು. ದುಡಿಯುತ್ತಿರುವ ಮಕ್ಕಳನ್ನು ರಕ್ಷಿಸಿ ಅವರ ಹಕ್ಕುಗಳನ್ನು ಅನುಭವಿಸಲು ಅವಕಾಶ ನೀಡಬೇಕು ಮತ್ತು ಮಕ್ಕಳಿಗೆ ಶಿಕ್ಷಣ ಕೊಡಿಸಿ ಬಾಲ ಕಾರ್ಮಿಕ ಪದ್ಧತಿಯನ್ನು ತೊಡೆದು ಹಾಕಬೇಕೆಂಬುದೇ ಈ ಹೊತ್ತಿಗೆಯ ಆಶಯ.

ಯುನಿಸೆಫ್ ನೊರಾಡ್ ಬಾಲಕಾರ್ಮಿಕ ಪದ್ಧತಿ ನಿರ್ಮೂಲನಾ ವಿಶೇಷ ಕ್ರಿಯಾ ಯೋಜನೆ
ದಾವಣಗೆರೆ.

**ಬಾಬುಜಾನ್** *-ಮಂಡಕ್ಕಿಭಟ್ಟಿ*
6ನೇ ತರಗತಿ, ಆಜಾದ್‌ನಗರ.

ಶಾಲೆಗೆ ಹೋಗ್ಬೇಕಾದ್ರೆ ಎಲ್ಲ ಚೆನ್ನಾಗಿರ್ತಿತ್ತು ಸಾರ್.ಆದ್ರೆ ಕೆಲ್ಸಕ್ಕೆ ಸೇರ್ಕೊಂಡ ಮೇಲೆ ದುಡ್ಡಿನಾಸೆ ಶುರುವಾಯ್ತು ಕೆಟ್ಬಿಟ್ಟೆ, ಇಲ್ಲಿ ಅದೆಲ್ಲಾ ತಪ್ಪು ಅಂತ ಈಗ ಗೊತ್ತಾಯ್ತು ಸಾರ್.

**ಮಹಮದ್‌ಸಾಧಿಕ್** *-ಹೋಟೆಲ್*
7ನೇ ತರಗತಿ, ಭಾಷಾನಗರ.

ತಂದೆ ಮುಖ ನೋಡಿ 9 ವರ್ಷ ಆಯ್ತು, ಓಡೋಗ್ಬಿಟ್ಟ, ಬೇಜವಾಬ್ದಾರಿ ಮನುಷ, ಮನೆ ಜವಾಬ್ದಾರಿನ ನನ್ ತಲೆ ಮೇಲಾಕಿದ್ರು.

**ಜಮೀರ್ ಸಾಬ್** *-ಹೋಟೆಲ್*
4ನೇ ತರಗತಿ, ಕೆ.ಟಿ.ಜೆ ನಗರ, ಹೋಟೆಲ್.

ಅಪ್ಪ ಇಲ್ಲ, ಅಮ್ಮನೂ ಇಲ್ಲ. ಅಜ್ಜಿಗೆ ಕಷ್ಟ, ಅದ್ಕೆ ಕೆಲ್ಸಕ್ ಸೇರ್ದೆ. ಇಲ್ಲಿರೊ ಪ್ರೀತಿ ಅಲ್ಲಿಲ್ಲ.

**ಅಣ್ಣಯ್ಯ** *-ಹೋಟೆಲ್*
6ನೇ ತರಗತಿ, ಶ್ರೀರಾಮನಗರ.

ಸ್ಕೂಲ್ ದೂರ ಇತ್ತು. ದಿನಾ ಬಸ್‌ಗೆ ದುಡ್ಡಿರ್ಲಿಲ್ಲ ಅದಕ್ಕೆ ಸಾಲಿ ಬಿಟ್ಟು ಹೋಟೆಲ್ ಸೇರ್ಕೊಂಡೆ. ಇನ್ಮುಂದೆ ಸಾಲಿಗೇ ಹೋಗ್ತೀನಿ, ಎಷ್ಟೇ ಕಷ್ಟ ಬರಲಿ.



**ಕೆ. ಮಂಜುನಾಥ** *-ಬಟ್ಟೆ ಅಂಗಡಿ*
6ನೇ ತರಗತಿ, ಎಸ್.ಪಿ.ಎಸ್. ನಗರ

ನನಗೆ 'ಅ' ಅನ್ನೋ ಅಕ್ಷರ ಬರ್ತಿರ್ಲಿಲ್ಲ. ಇಲ್ಲಿಗೆ ಬಂದ್ಮೇಲೆ ಕಲ್ತೆ, ಈಗ ನಮ್ಮಮ್ಮ ನನ್ನನ್ನ ಕೆಲಸಕ್ಕೆ ಹೋಗು ಅನ್ನಲ್ಲ.

**ರುಬಿನಾ** *-ಮನೆಗೆಲಸ*
4ನೇ ತರಗತಿ, ಎಂ.ಸಿ.ಸಿ. ಬಿ ಬ್ಲಾಕ್,

ಇದೇ ಮೊದ್ಲು, ನಾನು ಓದು ಅನ್ನೋದು ನೋಡಿದ್ದು, ನನ್ನ ಸ್ನೇಹಿತೆಯರೆಲ್ಲಾ ಕಾಡಿಸ್ತಿದ್ರು 'ಅನ್‌ಪಡ್' ಅಂತ, ಅಳ್ತಾ ಇದ್ದೆ. ಈಗ ಹೆಮ್ಮೆ ಆಗ್ತಾ ಇದೆ ಸಾರ್.

**ಪ್ರವೀಣ** - *ಹೂ ಮಾರುವುದು*
6ನೇ ತರಗತಿ, ಎಸ್.ಎಂ.ಕೆ.ನಗರ,

ನಮ್ಮ ಮಾವ ಕೆಲ್ಸಕ್ಕೆ ಕಳಿಸ್ತಿದ್ರು, ಬೆಳಗಿನ ಜಾವ ಐದು ಗಂಟೆಗೆ ಎದ್ದು ಹೂ ಮಾರೋಕೆ ಕಳಿಸ್ತಿದ್ರು. ಇಲ್ಲಿ ಚೆನ್ನಾಗಿ ಓದಿ ಹೆಂಗಿರ್ಬೇಕು ಅಂತ ತೋರಿಸ್ತೇನೆ.

**ಸಿದ್ದೇಶ್** *-ದನ ಕಾಯುವುದು*
3ನೇ ತರಗತಿ, ಆನಗೋಡು.

ಸ್ಕೂಲು ಎಲ್ಲಾ ಕಡೆ ಚೆನ್ನಾಗೈತೆ, ದನ ಕಾಯೋದು ಬೇಜಾರು ಸಾರ್.



**ಶೃತಿ** *-ಇಂಜಿನಿಯರ್ ಮನೆ ಕೆಲಸ*
4ನೇ ತರಗತಿ, ಮಾಯಕೊಂಡ,

ಅವ್ರುದು ದೊಡ್ಡ ಮನೆ ಸಾರ್. ಮಲಗಕೆ ಹೆದರ್ಕೆ ಆಗ್ತಿತ್ತು. ಸಾಲಿ ಕಟ್ಟೆ ಮೇಲೆ ಮಲಗ್ತಿದ್ದೆ. ಆಗ ಸಾರ್ ಬಂದು ಇಲ್ಲಿಗೆ ಕರ್ಕಬಂದ್ರು. ಇಲ್ಲಿ ಭಯ ಇಲ್ಲ.

**ಶಿವಣ್ಣ** *-ಕುರಿ ಕಾಯುವುದು*
3ನೇ ತರಗತಿ, ಮಜ್ಜಿಗೆರೆತಾಂಡ.

ಆ ಸ್ಕೂಲಲ್ಲಿ ನನ್ನನ್ನು ಯಾರೂ ಗಮನಿಸ್ತಿರ್ಲಿಲ್ಲ. ಇಲ್ಲಿ ನನ್ನನ್ನು 'ಮಿಸ್' ಪ್ರೀತಿಯಿಂದ ಮಾತಾಡಿಸ್ತಾರೆ.

**ಡಿಳ್ಯಾ ನಾಯ್ಕ** *-ಕಟ್ಟಡಕ್ಕೆ ನೀರು ಬಿಡುವುದು.*
5ನೇ ತರಗತಿ, ಅರಸಾಪುರ,

ನಮ್ಮ ತಂದೆ ತಾಯಿ ವಲಸೆ ಜನ, ಅವ್ರನ್ನ ಬಿಟ್ಟೆರಕೆ ಆಗ್ದೆ ಸಾಲಿ ಬಿಟ್ಟು ಅವರ ಹಿಂದೆ ತಿರುಗ್ತಿದ್ದೆ. ಇಲ್ಲಿಗೆ ಬಂದ್ ಮೇಲೆ ಅವ್ರ ನೆನಪು ಅಷ್ಟು ಆಗ್ತಿಲ್ಲ.

**ಸನಾವುಲ್ಲಾ** *-ಮಂಡಕ್ಕಿ ಭಟ್ಟಿ*
8ನೇ ತರಗತಿ, ಮಂಡಕ್ಕಿ ಭಟ್ಟಿ ಲೇಔಟ್,

ಓದೋಕೆ ಇಷ್ಟ. ನಮ್ಮಪ್ಪನ ಕಾಟ ಸಾರ್ ಅದ್ಕೆ ಕೆಲ್ಸಕ್ ಹೋದೆ.

**ಎಂ. ರಂಜಿತಾ** *-ಮುಪರೆ*
4ನೇ ತರಗತಿ, ಮದ್ರಹಳ್ಳಿ,

ಯಾಕೋ ಗೊತ್ತಿಲ್ಲ ಸಾಲಿ ಬಿಡಿಸಿ, ಕೆಲ್ಸಕ್ಕೆ ಸೇರ್ಸಿದ್ರು. ಆಗ, ಸ್ಕೂಲ್ ನೆನಪಾಕ್ತಾ ಇತ್ತು.

**ಜಬೀನ** - *ಮನೆಕೆಲಸ*
2ನೇ ತರಗತಿ, ಎಂ.ಸಿ.ಸಿ. ಬಿ ಬ್ಲಾಕ್,

ಅಮ್ಮ ಶಾಲೆಗೇ ಕಳಿಸ್ತಿಲ್ಲ, ಶಾಲೆಗೆ ಹೋಗೋರನ್ನ ನೋಡಿದ್ರೆ, ಆಗ ಹೊಟ್ಟೆ ಉರಿತಾ ಇತ್ತು.

**ಅಂಜನಮ್ಮ** - *ಹೋಟೆಲ್*
**4ನೇ ತರಗತಿ, ಎಲ್.ಐ.ಸಿ. ಕಾಲೋನಿ,**

ಹೋಟೆಲ್ ಮನೆ ಕೆಲ್ಸ ಬಾಳಾ ಇರ್ತಿತ್ತು. ದೊಡ್ ದೊಡ್ ಪಾತ್ರೆ ತೊಳಿತಿದ್ದೆ. ಎಲ್ಲರೂ ಕೆಲಸ ಹೇಳರೆ. ಇಲ್ಲಿ ಬರೀ ಓದೋದು ಚೆನ್ನಾಗಿದೆ.



**ಆರ್. ರಂಜಿತಾ** -*ಮುಸುರೆ*
2ನೇ ತರಗತಿ, ಗೊಲ್ಲರಹಳ್ಳಿ,

ಅಮ್ಮನೂ ಸಾಲಿಗೆ ಸೇರಿಸ್ಲಿಲ್ಲ, ಅಪ್ಪನೂ ಸಾಲಿಗೆ ಸೇರಿಸ್ಲಿಲ್ಲ, ಬರೆ ಮುಸುರೆ ಕೆಲಸ ಸಾರ್. ಇಲ್ಲಿಗೆ ಬಂದಿದ್ದು ಒಳ್ಳೆದಾಯ್ತು.

**ಇಮ್ರಾನ್ ಖಾನ್** -*ಮಂಡಕ್ಕಿ ಭಟ್ಟಿ*
4ನೇ ತರಗತಿ, ಭಟ್ಟಿ ಲೇಔಟ್,

ಇನ್ನೆಂದು ಮಂಡಕ್ಕಿ ಭಟ್ಟಿಗೆ ಹೋಗಲ್ಲ, ಭಾರಿ ಧೂಳು ಗಲೀಜು ಸಾರ್.

**ಇಸ್ಮಾಯಿಲ್** -*ಮಂಡಕ್ಕಿ ಭಟ್ಟಿ*
4ನೇ ತರಗತಿ, ಭಾಷಾನಗರ,

ಮೊದಮೊದಲು ಆ ಸ್ಕೂಲಿನಂಗೆ ಇದು ಅಂತ ತಿಳ್ಕೊಂಡಿದ್ದೆ. ಆದ್ರೆ ಈ ಸ್ಕೂಲ್ ಹಂಗಲ್ಲ. ಈಗ ಕಲೀತಿದ್ದೀನಿ ಸಾರ್.



**ಲಕ್ಷ್ಮೀಬಾಯಿ** -*ಕೂಲಿ*
5ನೇ ತರಗತಿ, ನಾಗರಕಟ್ಟೆ,

ನಾನು ತುಂಬಾ ಓದ್ಬೇಕು. ಯಾವುದು ಓದ್ಬೇಕಂತ ಇನ್ನು ಗೊತ್ತಾಗಿಲ್ಲ.

**ಆದಮ್ ಶಫಿ** -*ಮಂಡಕ್ಕಿ ಭಟ್ಟಿ*
4ನೇ ತರಗತಿ, ಭಟ್ಟಿ ಲೇಔಟ್,

ನಮ್ಮನೇಲಿ ಯಾರೂ ಓದಿಲ್ಲ. ನನಿಗೂ ಓದಕೆ ಬರಿಯಕೆ ಬರ್ತಿರ್ಲಿಲ್ಲಾ, ಅದ್ಕೆ ನಾನೇ ಇಸ್ಕೂಲ್ ಬಿಟ್ಟೆ. ಭಟ್ಟಿಗೆ ಸೇರಿಸಿದ್ರು.



**ಕೊಲ್ಲಮ್ಮ** - *ಬೀಜ ಪರಾಗಸ್ಪರ್ಷ*
5ನೇ ತರಗತಿ, ಕಂಚಿಕೆರೆ

ಬಾಲಕಾರ್ಮಿಕ ಶಾಲೆ ನನ್ನನ್ನು ತುಂಬಾ ಬದಲಾವಣೆ ಮಾಡಿದೆ. ನಾನು ಇನ್ನು ತುಂಬಾ ಕಲಿಯಬೇಕು.

**ಸಾವಿತ್ರ,** -*ಕೃಷಿ ಕೂಲಿ*
6ನೇ ತರಗತಿ, ನಾಗರಕಟ್ಟೆ,

ನನಗೆ ನೆನಪೇ ಇರುವುದಿಲ್ಲ. ಏನ್ಮಾಡ್ಲಿ ಸಾರ್, ಹೇಳ್ಕೊಡಿ.

**ನಿಂಗರಾಜು** - *ದನಕಾಯುವುದು*
5ನೇ ತರಗತಿ, ಗಿರಿಯಾಪುರ,

ಯಾರಿಗಾದರೂ ನಾನು ಸಹಾಯ ಮಾಡುವನಾಗ್ಬೇಕು.

**ಸಿ.ಮಂಜುನಾಥ** -*ದನ ಕಾಯುವುದು*
4ನೇ ತರಗತಿ, ಹಳೇ ಕುಂದುವಾಡ,


ನನ್ನನ್ನು ಶಾಲೆಗೆ ಒತ್ತಾಯಿಸಿದ ತಂದೆ ಈಗ ತುಂಬಾ ಇಷ್ಟ.

**ಬಿ. ಶಿವು** -*ಜೀತ*
6ನೇ ತರಗತಿ, ಕಂದನಕೋವಿ,

ಶ್ರೀಮಂತರ ಮಕ್ಕಳನ್ನು ಕಂಡರೆ ನಾನೂ ಅವರ ಹಾಗೆ ಕಲೀಬೇಕಂತ ಆಸೆ, ಹೇಗಾದ್ರೂ ಮಾಡಿ ಕಲೀತಿನಿ.

**ಡಿ. ಹನುಮಂತ** - *ಕೃಷಿ*
5ನೇ ತರಗತಿ, ಕಂದನಕೋವಿ.

ತುಂಟಾಟ ಬಿಟ್ಟು ಬಿಡಬೇಕು, ಗಂಭೀರವಾಗಿಲ್ಲದೇ ಹೋದರೆ, ಏನಾದ್ರು ಆಗೋಕೆ ಆಗಲ್ಲ.



**ಲಾಲ್ಯನಾಯ್ಕ** - *ಕೃಷಿ*
5ನೇ ತರಗತಿ, ನಾಗರಕಟ್ಟೆ.

ಕೆಲಸ ಮಾಡುವುದು ತುಂಬಾ ಕಷ್ಟವಾಗಿತ್ತು. ಈಗ ಓದುವುದು ತುಂಬಾ ಸುಲಭವಾಗಿದೆ.

**ಬಿ. ರಮೇಶ** -*ಕೃಷಿ*
6ನೇ ತರಗತಿ, ಕಂಚಿಕೆರೆ.

ನನಗೆ ಕಥೆ ಬರೀಲಿಕ್ಕೆ ಆಸೆ ಇದೆ, ಕಥೆ ಓದ್ತಾ ಇದ್ದೇನೆ, ಮುಂದೆ ಓದಿ ಕಥೆಗಾರನಾಗ್ತೇನೆ.

**ಎಂ. ಶೃತಿ** -*ಕೂಲಿ*
6ನೇ ತರಗತಿ, ಕಂದಗಲ್ಲು,

ನಗಿಸೋರನ್ನ ಕಂಡ್ರೆ ತುಂಬಾ ಇಷ್ಟ. ನಗ್‌ನಗ್ತಾ ಓದೋದು ಚಂದ.

**ಪಿ. ಹಾಲಮ್ಮ** -*ಕೂಲಿ*
6ನೇ ತರಗತಿ, ಹಳೇ ಕುಂದವಾಡ,

ನನ್ನ ದುಃಖ ಯಾರಿಗೂ ಹೇಳಲ್ಲ. ಕಲೀಬೇಕು ಅಷ್ಟೇ.



**ಎಂ. ಮಾಲತೇಶ್** - *ಕುರಿ ಕಾಯುವುದು.*
5ನೇ ತರಗತಿ, ಕಂಚಿಕೇರಿ,

ನಾನು ಕಲಿತ್ರೆ, ನನಿಗೇ ಪ್ರಯೋಜ್ನ, ನಮ್ಮನೆಗೆ ಪ್ರಯೋಜ್ನ, ಅದ್ಕೆ ನಾ ಕಲೀಬೇಕು.

**ಯಾಸ್ಮಿನ್** - *ಕುರಿ ಕಾಯುವುದು*
4ನೇ ತರಗತಿ, ದೇವರ ಹಟ್ಟಿ,

ನನ್ನ ತಂದೆಯಂತಹ ತಂದೆ ಯಾರಿಗೂ ಸಿಗಬಾರ್ದು, ಏಕೆಂದರೆ ನನ್ನನ್ನು ಓದೋಕೆ ಬಿಡಲ್ಲ.



**ಜ್ಯೋತಿ** -*ಕಳೇ ಕೀಳುವುದು*
4ನೇ ತರಗತಿ, ಕಂಚಿಕೆರೆ,

ನನಗೆ ಚೆನ್ನಾಗಿ ಕಲಿಸುವ ಶಿಕ್ಷಕರು ಬೇಕಾಗಿತ್ತು. ಅದು ಇಲ್ಲಿ ಸಿಕ್ಕಿದೆ.

**ಸುರೇಶ** -*ಜೀತ*
5ನೇ ತರಗತಿ, ಕೋಲುಕುಂಟೆ,

ಕಷ್ಟ ಇದ್ದರೇನೇ ಒಳ್ಳೇದು, ಕಷ್ಟ ಪಟ್ಟೆ ಕಲೀಬೇಕು.

**ಡಿ. ರಮೇಶ** -*ಕೆಲಸ*
4ನೇ ತರಗತಿ, ಕಂದಗಲ್ಲು, ತೋಟದ

ನಾನು ಬದಲಾಗಲು ಈ ಬಾಲಕಾರ್ಮಿಕ ಶಾಲೆ ಕಾರಣ.

**ಮದ್ದಾನ್‌ಸ್ವಾಮಿ** -*ಕುರಿಕಾಯುವುದು.*
5ನೇ ತರಗತಿ, ಕಂಚಿಕೆರೆ,


ನಾನೇ ಸ್ವಯಂ ಕಲೀತೇನೆ ಆಸಕ್ತಿಯಿಂದ ಓದಿ, ಮೇಲೆ ಬರುತ್ತೇನೆ.

**ನಸ್ರಿನ್** -*ಮನೆಗೆಲಸ*
5ನೇ ತರಗತಿ, ಭಾಷಾನಗರ,

ಕಲಿಯುವುದು ಶಿಕ್ಷೆ ಅಲ್ಲ, ಕಲಿಯದಿರುವುದು ಶಿಕ್ಷೆ.

**ಕವಿತ**-*ಕೂಲಿ*
4ನೇ ತರಗತಿ, ಕಂಚಿಕೆರೆ,

ನಾನು ಏನಾದ್ರು ವಿಶೇಷ ವ್ಯಕ್ತಿಯಾದರೆ, ನನ್ನನ್ನು ಎಲ್ಲರೂ ಇಷ್ಟ ಪಡುತ್ತಾರೆ. ಇನ್ಮೇಲೆ ಹಂಗೆ ಆಗ್ತೀನಿ.



**ಎನ್. ಗಣೇಶ** *-ಎಮ್ಮೆ ಕಾಯುವುದು.*
4ನೇ ತರಗತಿ, ಕೋಲುಕುಂಟೆ,

ಕೆಲಸ ಮಾಡ್ತಾ ಇದ್ದಲ್ಲಿ ಅವರೇ ಕಲಿಸ್ಬೇಕಿತ್ತು. ಅಂಥ ದೊಡ್ಡ ಗುಣ ಯಾರಿಗಿದೆ.

**ಹರಳಯ್ಯ** *-ಜೀತ*
5ನೇ ತರಗತಿ, ಕೋಲಕುಂಟೆ,

ನಾನು ಸಂತೋಷವಾಗಿರ್ಬೇಕು, ತಿನ್ನಬೇಕು. ಆಟ ಆಡಬೇಕು, ಪಾಠ ಓದಬೇಕು.

**ಕೆ.ನಾಗರಾಜ** - ಹೊಲದ ಕೆಲಸ
5ನೇ ತರಗತಿ, ಕಂಚಿಕೆರೆ,

ಅಮ್ಮ ನನ್ನ ಶಾಲೆ ಬಿಡಿಸಿ ಎಮ್ಮೆ ಕಾಯೋಕೆ ಹಚ್ಚಿದ್ರು. ಇಲ್ಲಾಂದ್ರೆ ಇನ್ನೂ ಹೆಚ್ಚು ಕಲೀತಿದ್ದೆ.

**ಸಂತೋಷ** *-ಜೀತ*
5ನೇ ತರಗತಿ, ನಾಗರಕಟ್ಟೆ,



ಯಾವ ಕೆಲ್ಸಕ್ಕೂ ನನಗೆ ಭಯವಿಲ್ಲ ಮಾಡುತ್ತೇನೆ. ಆದರೆ ಓದೋದು ಇಷ್ಟ.

**ರಾಜು** *-ಎಮ್ಮೆ ಕಾಯುವುದು*
5ನೇ ತರಗತಿ, ಮಗಾನಹಳ್ಳಿ,

ನಾನು ಎಲ್ಲರ ಹಾಗೆ ಇರ್ಬಾರ್ದು. ನನ್ನಲ್ಲಿ ಏನಾದ್ರೂ ವಿಶೇಷ ಇರ್ಬೇಕು, ಅದಕ್ಕೆ ನಾನು ಓದಿ ಸಾಧನೆ ಮಾಡಬೇಕು.



**ನಾಗರಾಜ** *-ಎಮ್ಮೆ ಕಾಯುವುದು*
4ನೇ ತರಗತಿ, ನಾಗರಕಟ್ಟೆ,

ಪದ್ಯ ಬರೆಯುವುದು ಹೇಗಂತ ಕಲ್ತುಕೊಬೇಕು, ಹಬ್ಬ ಮುಗಿದ್ಮೇಲೆ ಬರಿಲಿಕ್ಕೆ ಶುರುಮಾಡ್ತಿನಿ, ನನಗೂ ಬರೀಬೇಕು ಅಂತ ಆಸೆ.

**ಎಸ್. ಸಂತೋಷ** *-ತೋಟಕಾಯುವುದು.*
**6ನೇ ತರಗತಿ, ಶ್ಯಾಮನೂರು,**

ಶಿಕ್ಷಕರ ಕೆಲಸ ಒಳ್ಳೇ ಕೆಲಸ ಸಾರ್, ನಾನೂ ಓದಿ ಶಿಕ್ಷಕನಾಗ್ತೇನೆ.

**ನಿಸಾರ್ ಅಹ್ಮದ್** *-ಚಪ್ಪಲಿ ಅಂಗಡಿ*
5ನೇ ತರಗತಿ, ಭಾಷಾನಗರ,

ಓದಿ ಏನೋ ಆಗುವ ಕನಸು ಕಾಣ್ತಾ ಇರ್ತೇನೆ, ಅದು ನನಸಾಗೋದು ಯಾವಾಗ ?

**ವಿ. ಶೋಭಾ** *-ಕೂಲಿ ಕೆಲಸ*
6ನೇ ತರಗತಿ, ಕಂದಗಲ್ಲು,

ಮೇಷ್ಟ್ರು ಇಷ್ಟ ಹಾಗಾಗಿ ಪಾಠಾನೂ ಇಷ್ಟ ಆಗ್ತಾ ಇದೆ.



**ಆರ್. ಮಮತ** -*ಹೊಲದ ಕೆಲಸ*
6ನೇ ತರಗತಿ, ಹದ್ಕೆ.

ಬಣ್ಣ ತುಂಬಿದ ಪುಸ್ತಕ ಅಂದ್ರೆ ಇಷ್ಟ.

**ಆರ್. ಸೀತಾಬಾಯಿ** -*ಹೊಲದ ಕೆಲಸ*
6ನೇ ತರಗತಿ, ನೇರ್ಲಿಗೆ,

ಪ್ರಶ್ನೆ ಕೇಳಿ ಹೊಡೆಯುವ ಮೇಷ್ಟ್ರು ಬೇಡಾ ಸಾರ್.

**ಆರ್. ಪವಿತ್ರ** -*ಮನೆಗೆಲಸ*
4ನೆತರಗತಿ, **ಹೊಸಪೇಟೆ,**

ಈ ಶಾಲೆಯಲ್ಲಿ, ನನ್ನ ಮನೇಲಿ ಇದ್ದಂಗೆ ಇದ್ದೀನಿ.

**ಅಜ್ಜಯ್ಯ** -*ಇಟ್ಟಿಗೆ ಭಟ್ಟಿ*
4ನೇ ತರಗತಿ, ಕಂಚಿಕೆರೆ,

ತಂದೆ ತಾಯಿ ಪ್ರೀತಿ ಸಿಕ್ಕೇ ಇಲ್ಲ. ನಿಮ್ಮತ್ರ ಅದನ್ನ ಕಾಣ್ತಿದ್ದೇನೆ.



**ಸಿ. ಮಾಲತೇಶ** - *ಹೋಟೆಲ್*
6ನೇ ತರಗತಿ, ಕಂಚಿಕೆರೆ,

ಮುಂದೆ ಬಹಳ ಓದ್ಬೇಕು. ಏನೇನು ಓದ್ಬೇಕು ಅಂತ ಗೊತ್ತಿಲ್ಲ.




**ಪಿ. ಶಿವು** - *ಕಟ್ಟಡ ಕೆಲಸ*
6ನೇ ತರಗತಿ, ಹಿರೇಮೇಗಳಗೇರಿ,

ಅಣ್ಣಾವ್ರು ಸ್ಕೂಲಿಗೆ ಹೋಗೋಕೆ ಬಿಟ್ಟಿಲ್ಲ. ಹೆಚ್ಚು ಕಲ್ತು ನನ್ನ ಹತ್ರ ಅವ್ರೆ ಬರೋ ಹಂಗೆ ಮಾಡ್ತೀನಿ.



**ಎಸ್. ಗಣೇಶ್** -*ಕೈಗಾಡಿ ಕೆಲಸ*
5ನೇ ತರಗತಿ, ಹರಪನಹಳ್ಳಿ,

ಹೊಡೆದು ಹೇಳುವವರ ಮಾತು, ಕೇಳೋದಿಲ್ಲ.

**ಆರ್. ಹಾಲೇಶ** -*ಕೃಷಿ.*
5ನೇ ತರಗತಿ, ಕೋಡಿಹಳ್ಳಿ,

ಹಣ ಇರ್ಲೇ ಬಾರ್ದು, ಹಣ ಇದ್ರೆ ಆಸೆ ಜಾಸ್ತಿ, ಬುದ್ದಿ, ಶಿಕ್ಷಣ ಇರಬೇಕು.

**ನಾಗರಾಜ** -*ಮಡಿಕೆ ಮಾಡುವುದು*
5ನೇ ತರಗತಿ, ಕಂದಗಲ್ಲು,

ನಮ್ಮ ಸ್ಕೂಲಲ್ಲಿ ಹೆಚ್ಚು ಮಂದಿ ಮೇಷ್ಟ್ರು ಇದ್ದಿದ್ರೆ, ಹೆಚ್ಚು ಕಲಿಬೋದಿತ್ತು. ಅಲ್ಲಿ ಯಾರೂ ಕಲಿಸಲಿಲ್ಲ. ಇಲ್ಲಾದ್ರೆ ಕಲೀಬೋದು.

**ಎಸ್. ನೇತ್ರ** -*ಕೂಲಿ*
5ನೇ ತರಗತಿ, ಹಳೇಕುಂದುವಾಡ,

ಈಗ ಕಲಿಯುವುದು ಮಾತ್ರ ನನ್ನ ಕೆಲಸ, ಕಲ್ತು ಒಳ್ಳೆ ಕೆಲಸ ಸಿಗ್ಬೇಕು.

**ಎಂ. ನಾಗರಾಜ** -*ಕೂಲಿ*
5ನೇ ತರಗತಿ, ನಿಟ್ಟುವಳ್ಳಿ,

ಶಾಲೆಗೆ ಸೇರಿದ್ದು ಹೆಚ್ಚು ಕಲಿಯಲಿಕ್ಕಾಗಿ, ಕಲಿತು ಓದಿ ಸಾಹೇಬನಾಗ್ತೀನಿ.

**ಎಂ. ಅಕ್ಬರ್** -*ಮನೆಕೆಲಸ*
3ನೇ ತರಗತಿ, ಎಸ್.ಎಸ್.ಎಂ. ನಗರ,

ಅಕ್ಷರ ಕಲೀಬೇಕ್ ಸಾರ್.



**ಸಮೀರ್** -*ಹೋಟೆಲ್ ಕೆಲಸ*
3ನೇ ತರಗತಿ, 4ನೇ ಕ್ರಾಸ್,

ಓದೋಕೆ ಬರೆಯೋಕೆ ಬರೋ ಕಾಲಕ್ಕೆ ಶಾಲೆ ಬಿಡಲ್ಲ. ಏಕೆಂದರೆ ಚೆನ್ನಾಗಿ ಕಲ್ತಿರ್ತೀನಲ್ಲಾ.

**ಸೈಯದ್ ಗಫೂರ** - *ಮನೆಕೆಲಸ*
3ನೇ ತರಗತಿ, ಶಿವನಗರ,

ಮೇಷ್ಟ್ರು ಬೇರೆ ಯಾರಿಗಾದ್ರೂ ಹೊಡದ್ರು, ನನಗೆ ಒಂಥರ ಭಯ ಏನೇನೋ ಆಗ್ತದೆ.

**ಎನ್. ದುಗ್ಗೇಶ್** -*ಸೊಪ್ಪು ಮಾರಾಟ.*
3ನೇ ತರಗತಿ, ಶೇಖರಪ್ಪ ನಗರ,

ಇನ್ ಮೇಲೆ ನನ್ನ ತುಂಟತನ ಬಿಟ್ಟು ಬಿಡ್ತೀನಿ. ಓದೋ ಮನಸ್ ಮಾಡ್ತೀನಿ.



**ಎನ್. ಇಬ್ರಾಹಿಂ** -*ನೀರು ಮಾರಾಟ.*
3ನೇ ತರಗತಿ, ಎಸ್. ಎಸ್. ನಗರ,

ಮೇಷ್ಟ್ರು ಕೇಳೊ ಪ್ರಶ್ನೆಗೆ ನಾನು ಮೊದಲು ಉತ್ತರ ಕೊಡಬೇಕು. ಹಂಗಾದ್ರೆ ನಾನು ಚನ್ನಾಗಿ ಓದ್ಲೇಬೇಕು.

**ದಾದಾಪೀರ್** - *ಮನೆಗೆಲಸ*
3ನೇ ತರಗತಿ, ಬಾಷಾನಗರ,

ಒಳ್ಳೆಯ ಕಥೆಗನ್ನು ಕೇಳಿದ್ದೇನೆ ಹಾಗೇ ಆಗಬೇಕು ಅಂತ ಆಸೆ ನನಗೆ.



**ಎಸ್. ಪರಶುರಾಮ** -*ಚಿಂದಿ ಆಯುವುದು*
3ನೇ ತರಗತಿ, ಎಸ್. ಪಿ. ಎಸ್. ನಗರ,

ಏನೇನೊ ಕಲಿಯಬೇಕಂತ ನನಗೆ ಆಸೆ. ಕಲ್ಸಿದ್ರೆ ಕಲಿತೀನಿ.

**ಶಾಕತ್ ಆಲಿ** -*ಮೇಕೆ ಕಾಯುವುದು*
3ನೇ ತರಗತಿ, ಎಸ್. ಎಸ್. ಎಂ. ನಗರ,

ಏನೇ ಆದ್ರೂ ಇಂತಹ ಸ್ಕೂಲಲ್ಲಿ ಪೂರ್ಣ ಕಲಿಯದೆ ಇಲ್ಲಿಂದ ಹೋಗಲಾರೆ.

**ಮಹಮದ್** -*ಮನೆಕೆಲಸ*
3ನೇ ತರಗತಿ, ಆಜಾದ್ ನಗರ,

ಕಲಿಸೋರಿದ್ರೆ ಕಲಿತೀನಿ ಸಾರ್. ನನಗೆ ಮೇಲೆ ಬರಬೇಕಂತ ಆಸೆ.

**ವಿ. ಜೀತ** -*ಎಮ್ಮೆ ಕಾಯುವುದು*
3ನೇ ತರಗತಿ, ಉದ್ಕಟ್ಟೆ ದೊಡ್ಡ ತಾಂಡ,

ಎಲ್ಲರಂತೆ ನಾನೂ ಚೆನ್ನಾಗಿ ಮಾತನಾಡಬೇಕನ್ಸುತ್ತೆ. ಆದರೆ ಭಯ....ನೀವು ಧೈರ್ಯ ಕೊಟ್ರೆ ಮಾತಾಡ್ತೀನಿ.

**ಎಸ್. ದಾದಾಪೀರ್** - ಮನೆ ಕೆಲಸ
3ನೇ ತರಗತಿ, ಶಿವನಗರ,

ನನಗೆ ಅವಕಾಶ ಸಿಕ್ಕರೆ ಚೆನ್ನಾಗಿ ಕಲೀತೀನಿ. ಕಲ್ಸೋರ್‌ಬೇಕಲ್ಲಾ.



**ಡಿ. ಆರೀಫ್** - *ಗುಜರಿ ಅಂಗಡಿ ಕಾಯುವುದು*
3ನೇ ತರಗತಿ, ಬೀಡಿ ಲೇಔಟ್,

ನಾನು ಚೆನ್ನಾಗಿ ಕಲಿಬೇಕಂತ ಆಸೆಯಾಗಿದೆ. ಕಲೀತಿನಿ ನೀವು ಕಲ್ಸಿದ್ರೆ.

**ಐ. ಮುಬಾರಕ್** *-ಮನೆಕೆಲಸ*
3ನೇ ತರಗತಿ, ಎಸ್.ಎಸ್.ಎಂ.ನಗರ,

ನಾನೆಂದೂ ಫೇಲಾಗಲ್ಲ. ನಿವೇಳ್ಕೊಟ್ಟುದ್ದೆಲ್ಲ ಕಲ್ತು ಪಾಸ್ ಮಾಡ್ತೀನಿ.

**ಎ. ಜಬೀವುಲ್ಲಾ** *-ಹೋಟೆಲ್ ಕೆಲಸ*
3ನೇ ತರಗತಿ, ಶಿವನಗರ,

ನನಗೆ ಎಲ್ಲವು ಗೊತ್ತಿರ್ಲೇಬೇಕು, ನಾನ್ ಗೊತ್ ಮಾಡ್ಕೋತ್ತೀನಿ. ತಿದ್ದಿ ಹೇಳ್ಕೊಡ್ಬೇಕಷ್ಟೆ.

**ಎಸ್. ಬುಡೇನ್** *-ಕುರಿ ಕಾಯುವ ಕೆಲಸ*
3ನೇ ತರಗತಿ, ದೇವರಹಟ್ಟಿ,

ಬಿಸಿಲು, ಮಳೆಯಲ್ಲಿ ಕುರಿ ಕಾಯೋದನ್ ಬಿಟ್ಟು ಶಾಲೇಲಿ ಕಲಿತಿನಿ. ಎಲ್ಲೂ ಹೋಗಲ್ಲ.

**ಎ. ಮುಬಾರಕ್** *-ಮನೆ ಕೆಲಸ*
3ನೇ ತರಗತಿ, ಮೆಹಬೂಬ್ ನಗರ,

ನಾನು ಚೆನ್ನಾಗಿ ಕಲೀಬೇಕು ಅನ್ನೋ ಆಸೆ.

**ಎಸ್. ಸುಹೇಲ್** *-ಮನೆಗೆಲಸ*
3ನೇ ತರಗತಿ, ದೇವರಹಟ್ಟಿ,




ನಾನು ಇಂತಹ ಶಾಲೇಲಿ ಕಲಿಯಾಕೆ ಅವಕಾಶ ಸಿಗಲ್ಲ ಅಂದ್ಕೊಂಡಿದ್ದೆ. ಈಗಲಾದ್ರೂ ಸಿಕ್ತಲ್ಲ.

**ಎಂ. ಮುಬಾರಕ್** *-ಮನೆಕೆಲಸ*
3ನೇ ತರಗತಿ, ಮೆಹಬೂಬ್ ನಗರ,

ಚೆನ್ನಾಗಿ ಕಲಿತೀನ್ ಸಾರ್, ಆದ್ರೆ ಹೊಡ್ದು ಹೆದ್ರಸ್‌ಬಾರ್ದು, ಹೇಳ್ಕೊಡ್ಬೇಕು.



**ಹೆಚ್.ಆರ್. ನಿಂಗರಾಜ** *-ದಾ.ತಾ. ಹಸು ಕಾಯುವುದು*
3ನೇ ತರಗತಿ, ಹದಡಿ,

ಬಯ್ಯೋದಿದ್ರೆ , ಹೊಡೆಯೋದಿದ್ರೆ ಎಲ್ಲರ ಮುಂದೆ ಬೇಡ ಸಾರ್.

**ಮಹಮದ್ ಶರೀಫ್** *-ಮನೆಕೆಲಸ*
4ನೇ ತರಗತಿ, ಎಲ್ಲಮ್ಮ ನಗರ,

ನನಗೆ ಅವಕಾಶ ಕೊಟ್ರೆ ಏನಾದರೂ ಮಾಡಬಲ್ಲೆ

**ಹೆಚ್. ಹರೀಶ್** *-ಚಿಂದಿ ಆಯುವುದು*
4ನೇ ತರಗತಿ, ಶಾಮನೂರು,

ಚೆನ್ನಾಗಿ ಬದುಕಬೇಕಾದ್ರೆ, ಚೆನ್ನಾಗಿ ಕಲಿಯಬೇಕು.

**ಎಂ. ರಮೇಶ್** *-ಮನೆಕೆಲಸ*
4ನೇ ತರಗತಿ, ಎ.ಕೆ.ಕಾಲೋನಿ, ಹರಿಹರ,

ನಾನ್ ಮನೆ ಕೆಲ್ಸ ಬಿಟ್ಟು, ಇನ್ಮೇಲೆ ಅಕ್ಷರ ಕಲಿತಿನಿ ಸಾರ್.

**ಹೆಚ್. ಪರಶುರಾಮ**
*-ನೀರು ಮಾರಾಟ*
4ನೇ ತರಗತಿ, ಎಸ್.ಎಸ್.ಎಂ.ನಗರ.

ಅಪ್ಪ, ಅಮ್ಮ ದೂರ ಇದ್ದರು ಸಹ ಅವ್ರ್ ಕಡೆ ಗ್ಯಾನ ಮಾಡ್ಕಳಲ್ಲ. ಪಾಠ ಕಲಿತೀನ್ ಸಾರ್.



**ಬೀರಾನಾಯ್ಕ** *-ಹೊಲದ ಕೆಲಸ*
**4ನೇ ತರಗತಿ, ದೊಡ್ಡಬಾತಿ,**

ಚೆನ್ನಾಗಿ ಓದ್ಬೇಕು ಅಂತ ಆಸೆ....ಪ್ರೀತಿ ವಿಶ್ವಾಸದಿಂದ ಓದ್ಸಿದ್ರೆ ನಾನು ಓದೇ ಓದ್ತೀನಿ.

**ಎಂ. ಧನಂಜಯ** *-ತಂದೆಯ ಜೊತೆ ಕಾಫಿ ತೋಟಕ್ಕೆ ಹೋಗುವುದು*
4ನೇ ತರಗತಿ, ದೊಡ್ಡ ಓಬ್ಬಜ್ಜಿಹಳ್ಳಿ,

ಕಾಫಿ ಸೀಮೆ ಕೆಲ್ಸಕ್ಕಿಂತ ಸ್ಕೂಲೇ ಓಳ್ಳೇದು ಅಂತ ಅನ್ನಿಸ್ತು.

**ಹೆಚ್. ಮಂಜುನಾಥ** *-ಚಿಂದಿ ಆಯುವುದು*
4ನೇ ತರಗತಿ, ಗಾಂಧಿನಗರ,

ನಾನು ಕೊಚ್ಚೆಯಲ್ಲಿ ಕೈ ಹಾಕೋದನ್ ಬಿಟ್ಟು ಇನ್ಮೇಲಿ ಕಲೀತೀನ್ ಸಾರ್.

**ಜಾನ್‌ಪೀರ್** *-ಹೋಟೆಲ್ ಕೆಲಸ*
4ನೇ ತರಗತಿ, ಹೆಗಡೆ ನಗರ,
ಚೆನ್ನಾಗಿ ಕಲಿಯಬೇಕಾದ್ರೆ ಪೆಟ್ಟು ತಿನ್ನಬೇಕು, ಅಲ್ವಾ ಸಾರ್.



**ಎಂ. ಇರ್ಫಾನ್** *-ಸೊಪ್ಪು ಮಾರಾಟ*
4ನೇ ತರಗತಿ, ಸಿದ್ದೇಶ್ವರ ಬಡಾವಣೆ,

ಊಟ ಸರಿಯಾಗಿ ಸಿಗ್ದಿದ್ರೇನು? ನೀರು ಕುಡಿದಾದ್ರೂ ಕಲೀತಿದ್ದೆ.

**ತಾಹೀರ್** *-ಮನೆಗೆಲಸ*
4ನೇ ತರಗತಿ, ಕೆ.ಟಿ.ಜೆ ನಗರ,

ಯಾವುದೇ.... ತರ ಇದ್ರೂ, ನಾನು, ಅಕ್ಷರ ಕಲಿಯಬೇಕು.

**ಎ. ಆರೀಫ್** *-ಮನೆಕೆಲಸ*
**4ನೇ ತರಗತಿ, ಮೆಹಬೂಬ್ ನಗರ,**

ಬೇರೆಯವರ್ನ ನೋಡಿ ಕಲೀತಿನಿ.



**ಐ. ಜಬೀವುಲ್ಲಾ** *-ನೀರು ಮಾರಾಟ*
**4ನೇ ತರಗತಿ. ಎಸ್, ಎಸ್, ಎಂ.ನಗರ,**

ನನಗೆ ಎಲ್ಲವು ಗೊತ್ತಿರಲೇಬೇಕು ಅಂತ ಇಲ್ಲಿಗೆ ಬಂದಾಗ ಗೊತ್ತಾಗಿದೆ. ಈಗ ತಿಳಿದುಕೊಳ್ತಾ ಇದ್ದೇನೆ.

**ಎನ್. ಮಲ್ಲೇಶ್** *-ಕುರಿಕಾಯುವುದು*
4ನೇ ತರಗತಿ, ಗೌರೀಹಳ್ಳಿ,


ನಾನು ದೊಡ್ಡವನಾದ ಮೇಲೆ ಕೆಲ್ಸ ಮಾಡ್ತೀನಿ. ಸಂಪಾದ್ನೆ ಮಾಡಿ, ಅದರಲ್ಲಿ ಬೇರೆಯವರ್ಗ್ಗ ಸಹಾಯ ಮಾಡ್ತೀನಿ.

**ಶೇಕ್‌ಸಲ್ಯಾನ್** *-ಹೋಟೆಲ್ ಕೆಲಸ*
4ನೇ ತರಗತಿ, ಎಸ್.ಎಸ್. ಎಂ.ನಗರ,

ಮಾತನಾಡಲು ಭಯ ಆಗ್ತದೆ ತಪ್ಪಾದ್ರೇ ಅಂತ. ನೀವು ಪ್ರೀತಿಯಿಂದ ಕಂಡ್ರೆ, ಸರಿಯಾಗಿ ಮಾತಾಡ್‌ಬೋದು.

**ಹೆಚ್. ಮಾರುತಿ** *-ದನ ಕಾಯುವುದು*
4ನೇ ತರಗತಿ, ಗುತ್ತೂರು, ಹರಿಹರ,

ಮೇಷ್ಟ್ರು ಹೇಳಿದಂಗೇ, ನಾನೂ ಮೇಷ್ಟ್ರು ಆಗ್ತೀನಿ ಸರ್.



**ಹೆಚ್. ಶಿವರಾಜ್** *-ಕುರಿ ಕಾಯುವುದು*
4ನೇ ತರಗತಿ, ಹಾಲಿವಾಣ,

ನಾನು ಇನ್ ಮೇಲೆ ಯಾವತ್ತು ಕೆಲ್ಸಕ್ಕೆ ಹೋಗಲ್ಲ ಸರ್, ಅದು ಕಷ್ಟ.

**ಎಂ. ರಘು** *-ಚಿಂದಿ ಆಯುವ ಕೆಲಸ*
5ನೇ ತರಗತಿ, ಗಾಂಧಿನಗರ,

ಚೆನ್ನಾಗಿ ಓದಿದ್ರೆ ದೊಡ್ಡ ವ್ಯಕ್ತಿ ಆಗಬಹುದು.

**ಆರ್. ತಬ್ರೇಜ್** - *ಮನೆಗೆಲಸ*
4ನೇ ತರಗತಿ, ಎಸ್.ಎಸ್.ಎಂ. ನಗರ,

ಹೊಸ ಹೊಸ ವಿಷಯಾನ ಮೇಷ್ಟ್ರು ತುಂಬಾ ಹೇಳ್ತಿದ್ರೆ ಸ್ಕೂಲ್ ಇಷ್ಟ ಆಗ್ತಿರ್ತದೆ.

**ಆರ್. ಹನುಮಂತ** - *ಕುರಿ ಕಾಯುವ ಕೆಲಸ*
5ನೇ ತರಗತಿ, ಸಿರಿಗೆರೆ,

ನಾನು ಯಾರನ್ನು ಬಯ್ಯೋದಿಲ್ಲ, ಪಾಠ ಕಲೀತಿನಿ.

**ಎಂ. ಸದ್ದಾಂಹುಸೇನ್** - *ಅವಲಕ್ಕಿ ಮಿಲ್ ಕೆಲಸ*
4ನೇ ತರಗತಿ, ಕಾರ್ಲ್‌ಮಾರ್ಕ್ಸ್ ನಗರ,

ನಾನು ಬೆಂಕಿಯಲ್ಲಿ ಇರೋದನ್ ಬಿಟ್ಟು, ಶಾಲೆಗೆ ಸೇರಿ ಕಲೀತಿನ್ ಸಾರ್.

**ಎಂ. ಮಂಜುನಾಥ** - *ಚಿಂದಿ ಆಯುವ ಕೆಲಸ*
4ನೇ ತರಗತಿ, ಗಾಂಧಿ ನಗರ,

ನಾನು ಬರೆ ಆಟ ಮಾತ್ರ ಆಡೋದ್ ಸರಿಯಲ್ಲ ಅಂದ್ಕೊಂಡಿದೀನಿ, ಜೊತೆಗೆ ಓದಲೂ ಬೇಕು.



**ಎಸ್. ದಾದಾಪೀರ್**
*-ವರ್ಕ್‌ಶಾಪ್ ಕೆಲಸ*
4ನೇ ತರಗತಿ, ಎಸ್.ಎಸ್.ಎಂ. ನಗರ,

ಸರ್, ನೀವು ಯಾವಾಗ್ಲೂ ಹೇಳಿಕೊಡ್ತಾ ಇದ್ರೆ, ನಾನ್ ಚೆನ್ನಾಗಿ ಕಲಿತೀನಿ.



**ಕೆ. ರಾಜು** - *ಕಲ್ಲು ಹೊಡೆಯುವ ಕೆಲಸ*
5ನೇ ತರಗತಿ, ಚನ್ನನಹಟ್ಟಿ,

ಸ್ಕೂಲ್ ಬಿಟ್ಟು ಕಲ್ಲು ಒಡೆಯುವ ಕೆಲ್ಸ ಮಾಡ್ತಿದ್ದೆ. ನಮ್ಮೂರ್ ಮೇಷ್ಟ್ರುಗಿಂತ ಅಲ್ಲೇ ಪ್ರೀತಿ ಹೆಚ್ಚು ಸಿಕ್ತಾ ಇತ್ತು.

**ಸಮೀರ್** - *ಸೀಮೆಎಣ್ಣೆ ಮಾರಾಟ*
4ನೇ ತರಗತಿ, ಜಾಲಿ ನಗರ,


ನಮ್ಮ ಮನೇಲಿ ನಮ್ಮ ಅಮ್ಮ ಶಾಲೆಗೆ ಹೋಗು ಅಂತ ಹೇಳಿದ್ರು, ಆಗ ಹೋಗಲಿಲ್ಲ. ಈಗ ಕಲಿಬೇಕು ಅನ್ಸಿದೆ.

**ಮನ್ಸೂರ್ ಆಲಿಗಿ** - *ಅಂಗಡಿ ಕೆಲಸ*
5ನೇ ತರಗತಿ, ಭಾಷಾ ನಗರ,

ನಾನು ಇನ್ಮೇಲ್ ಕೆಲ್ಸಕ್ಕೆ ಹೋಗಲ್ಲ. ಶಾಲೆಗೆ ಹೋಗ್ತೀನೆ.

**ಕೆ. ವಿಕ್ರಮ್** - *ಕುರಿ ಕಾಯುವುದು*
5ನೇ ತರಗತಿ, ಹೊಸಕ್ಯಾಂಪ್ ಡಿ ಬ್ಲಾಕ್,

ಯಾರಿಗೂ ನೋವು ಮಾಡಬಾರದು, ದೊಡ್ಡವರೇಳ್ದಂಗೆ ಕೇಳ್‌ಬೇಕು.



**ಎನ್. ಸುನೀಲ್** - *ಕುರಿಕಾಯುವ ಕೆಲಸ*
5ನೇ ತರಗತಿ, ಉದ್ಕಟ್ಟೆ ದೊಡ್ಡತಾಂಡ,

ನಾನ್ ಮತ್ತೆ ಶಾಲೆಗೆ ಸೇರಲು ನನ್ ಚಿಕ್ಕಪ್ಪ ಕಾರಣ. ಇನ್ಮೇಲೆ ಶಾಲೆ ಬಿಡಲ್ಲ ಸಾರ್.

**ಕೆ. ಮುಬಾರಕ್** -*ಗ್ಯಾರೇಜ್ ಕೆಲಸ*
5ನೇ ತರಗತಿ, ಹೊಸಕ್ಯಾಂಪ್,

ಚೆನ್ನಾಗಿ ಓದಲು ಸಹಾಯ ಬೇಕು, ಅದು ಸಿಕ್ಕಿದ್ರೆ ನಾನು ಶಾಲೆ ಬಿಡಲ್ಲ.

**ಕೆ. ಇಮ್ತಿಯಾಜ್** -*ಹೋಟೆಲ್ ಕೆಲಸ*
5ನೇ ತರಗತಿ, ಎಸ್.ಎಸ್.ಎಂ.ನಗರ,

ಸುಮ್ಮನೆ ಇರೋದಕ್ಕಿಂತ ಬೇರೆ ಬೇರೆ ಸಾಧನೆ ಮಾಡ್ಬೇಕು.

**ಅಬ್ದುಲ್ ರಹೀಂ** -*ಖಾಲಿ ಚೀಲ ಹೊಲಿಯುವ ಕೆಲಸ*
5ನೇ ತರಗತಿ, ಎಸ್.ಎಸ್.ಎಂ.ನಗರ,

ಈಗ ಕಾಸ್ ಬೇಕಿಲ್ಲ. ಕಲಿತು ಮುಂದೆ ಪಡಕೊಳ್ತೀನೆ.

**ಎ. ಮುಬಾರಕ್** -*ಮನೆ ಕೆಲಸ*
5ನೇ ತರಗತಿ, ಎಸ್. ಎಸ್.ಎಂ. ನಗರ, ಬಿ ಬ್ಲಾಕ್,

ಚೆನ್ನಾಗಿ ಓದುವುದಂದ್ರೆ ಹೇಗಂತ ಗೊತ್ತಿಲ್ಲ. ಹೇಳ್ಕೊಟ್ರೆ ಕಲೀತೀನಿ.





**ಎಸ್. ಗುರುರಾಜ** -*ಚಿಂದಿ ಆಯುವ ಕೆಲಸ*
5ನೇ ತರಗತಿ, ಗಾಂಧೀನಗರ,

ಹಿಂದೆ ಚಿಂದಿ ಆಯುವ ಕೆಲ್ಸ ಮಾಡ್ತಿದ್ರೂ ಮುಂದೆ ಖಂಡಿತಾ ದೊಡ್ಡ ಜನ ಆಗ್ತೀನೆ, ಅದಕ್ಕೆ ಓದ್ ಬೇಕಂತ ಆಸೆ.

**ಎಸ್. ಡಿ. ಸದ್ದಾಂಹುಸೇನ್** -*ಬಡಗಿ ಕೆಲಸ*
5ನೇ ತರಗತಿ. ಭಾಷಾನಗರ,


ತಿನ್ನುವ ಆಸೆ ಹೆಚ್ಚಾದ್ರೆ ಕಲಿಯುವ ಮನಸ್ಸು ಕಡಿಮೆ ಆಗ್ತದೆ. ಅದಕ್ಕಾಗಿ ನನಗೆ ತಿನ್ನಲು ಆಸೆ ಇಲ್ಲ.

**ಎಂ. ಹನುಮಂತ** -*ಹೋಟೆಲ್ ಕೆಲಸ*
5ನೇ ತರಗತಿ, ಎ.ಕೆ.ಕಾಲೋನಿ,

ನಾನ್ ಸುಳ್ಳು ಹೇಳಿ ತಪ್ಪಿಸ್‌ಕೊಳ್ಳೋದ್ ಬಿಟ್ ಕಲಿತಿನಿ ಇನ್ಮೇಲೆ.

**ಎ. ಆರ್. ಆಂಜನೇಯ** -*ಮನೆ ಕೆಲಸ*
5ನೇ ತರಗತಿ, ಹಿರಿಹಾಲಿವಾಣ,

ನಾನು ಆಟ ಆಡೋದನ್ ಬಿಟ್ ಪಾಠ ಕಲಿತಿನಿ ಸಾರ್.



**ಕೆ. ವೀರಭದ್ರ,** -*ಎಮ್ಮೆ ಕಾಯುವ ಕೆಲಸ*
5ನೇ ತರಗತಿ, ಹಿರಿಹಾಲಿವಾಣ,

ಕೆಲ್ಸ ಅಂದರೆ ಕಷ್ಟ , ಓದಿಕೊಂಡು ಚೆನ್ನಾಗಿರ್ತೀನಿ.

**ಹೆಚ್. ಶಶಿಕುಮಾರ್** -*ಮನೆ ಕೆಲಸ*
6ನೇ ತರಗತಿ, ಶೇಖರಪ್ಪ ನಗರ,

ಅಣ್ಣನಂತೆ ಶಾಲೆಗೆ ಹೋಗ್ದೆ ಕೆಟ್ಟವನು ನಾನಾಗ್ಬಾರ್ದು.

**ಎಂ. ಗುರುಮೂರ್ತಿ** -*ಕೂಲಿ ಕೆಲಸ*
6ನೇ ತರಗತಿ, ಗೋಣಿವಾಡ,

ಕಲೀಬೇಕಂತಾದ್ರೆ, ಬೇಗ ಕಲ್ತು ಮುಗಿಸ್ತೇನೆ. ಆದ್ರೆ ಚೆನ್ನಾಗಿ ಅರ್ಥ ಆಗೋವಂಗೆ ಹೇಳ್‌ಕೊಡಬೇಕು.

**ರವಿನಾಯ್ಕ** -*ಎಮ್ಮೆ ಕಾಯುವುದು*
6ನೇ ತರಗತಿ, ಉದ್ಗಟ್ಟೆಹಾದಿಗಿಡ್ಡ ತಾಂಡ,

ನಾನು ಕಲಿತು ತುಂಬಾ ದೊಡ್ಡ ಜನ ಆಗಬೇಕು.

**ಬಿ. ಶಫಿವುಲ್ಲಾ** -*ಮನೆಕೆಲಸ*
6ನೇ ತರಗತಿ, ಶೇಖರಪ್ಪ ನಗರ,

ನಮ್ ಮನೇಲಿ ಕಷ್ಟ. ನಾನು ಚೆನ್ನಾಗಿ ಕಲೀತಿನಿ.

**ಕೆ. ಇಂಬ್ರಾನ್** -*ಹಣ್ಣು ವ್ಯಾಪಾರ*
6ನೇ ತರಗತಿ, ಹೊಸಕ್ಯಾಂಪ್,



ಕಲಿಯುವ ಆಸೆ ಹೆಚ್ಚಾಗಿ ಇದೆ. ಕಲ್ಸೂರ್‌ಬೇಕಲ್ಲ.

**ಎ. ಸಾಧಿಕ್** -*ಮನೆಕೆಲಸ*
6ನೇ ತರಗತಿ, ಎಸ್.ಎಸ್.ಎಂ. ನಗರ,

ನಾನು ಯಾವತ್ತಿನಿಂದ ಓದುವ ಕೆಲ್ಸ ಮಾಡ್ಲಿ ನೀವೇ ಹೇಳಿ ಸಾರ್, ನಾನು ಗೌರ್‍ನ್ಮೆಂಟ್ ಕೆಲ್ಸಕ್ಕೇ ಹೋಗಬೇಕು.

**ಕೆ. ಇರ್ಬಾನ್** -*ತರಕಾರಿ ಮಾರಾಟ*
6ನೇ ತರಗತಿ, ಎಸ್.ಎಸ್.ಎಂ. ನಗರ,

ಕಲಿಯೋ ಆಸೆ ತುಂಬ ಇದೆ.



**ಆರ್. ಜನಿಬೇರ್‌ವುಲ್ಲಾ** -*ಬಳೆಮಾರಾಟ.*
6ನೇ ತರಗತಿ, ಹೊಸಕ್ಯಾಂಪ್,

ಕಲಿಯೋ ಮನಸಾದ್ರೆ ಕಲಿತಾ ಇರ್ತೀನಿ, ಹೇಳ್ಕೊಡಬೇಕು ನಂಗೆ.

**ಡಿ. ಅಣ್ಣಪ್ಪ** -*ಚಿಂದಿ ಆಯುವ ಕೆಲಸ*
6ನೇ ತರಗತಿ, ಗಾಂಧಿನಗರ,

ಆಗ ಕಷ್ಟ ಇತ್ತು, ಇಲ್ಲಾದ್ರೆ ಓದಬಹುದು.

**ಜಿ. ದಶರಥ** -*ಕಲ್ಲು ಹೊಡೆಯುವ ಕೆಲಸ*
6ನೇ ತರಗತಿ, ಚೆನ್ನನಹಟ್ಟಿ,

ನನ್ನನ್ನು ಹೊಗಳಿದ್ರೆ ಚನ್ನಾಗಿ ಕಲಿತೀನಿ, ಎಲ್ಲಾ ಕೆಲ್ಸನೂ ಮಾಡ್ತೀನಿ. ಯಾರೂ ಬೈಬಾರ್ದು.

**ಶಿವರಾಜಕುಮಾರ್** -*ಕೃಷಿ ಕೆಲಸ*
ಹಿರೇತೊಗಲೇರಿ,

ಇನ್ನು ಮುಂದೆ ಓದೋದೆ ನನ್ನ ಕೆಲಸ, ಒಬ್ನೇ ಕೂತು ತುಂಬಾ ಓದ್ತಾ ಇರ್ಬೇಕು.

**ಡಿ. ಕೆ. ಮಹೇಶ್** -*ಎಲೆಬಳ್ಳಿ ಕಟ್ಟುವ ಕೆಲಸ*
6ನೇ ತರಗತಿ, ಹಿರಿ ಹಾಲಿವಾಣ,

ನನ್ನ ಗೆಳೆಯರ್ನ ಕರ್‍ಕೊಂಡು ಕೆಲಸಕ್ಕೆ ಹೋಗಲ್ಲ.



**ಎ. ಆರ್. ಹನುಮಂತ** *-ಎಲೆ ಬಳ್ಳಿ ಕಟ್ಟುವ ಕೆಲಸ*
6ನೇ ತರಗತಿ, ಹಿರಿ ಹಾಲಿವಾಣ,

ನಮ್ಮ ಅಪ್ಪ ಅಮ್ಮ ಸೇರಿ ನನ್ನ ಕೂಲಿಗೆ ಕಳಿಸ್ತಿದ್ರು. ನನಗೆ ಇಷ್ಟ ಇರ್ಲಿಲ್ಲ. ಈಗ ಸರಿ ಓದುವುದು.

**ವೈ. ಆರ್. ರಂಗನಾಥ** *-ದನ ಕಾಯುವ ಕೆಲಸ*
6ನೇ ತರಗತಿ, ಹಿರಿ ಹಾಲಿವಾಣ,

ಮೇಷ್ಟ್ರು ಹೇಳಿದ್ನೆಲ್ಲಾ ಕಲಿಬೇಕನ್ನಿಸುತ್ತೆ ಸಾರ್, ಆದರೆ ಬೇಗ ಕಲಿಯೋದು ಕಷ್ಟ.

**ರಮೇಶ್** *-ದನ ಕಾಯುವುದು*
5ನೇ ತರಗತಿ,

ಎಲ್ಲರೂ ಪ್ರೀತಿಯಿಂದ ಮಾತಾಡಿಸ್ಬೇಕು.

**ಜಿ. ಆನಂದ** *-ಮೇಕೆ ಕಾಯುವುದು*



4ನೇ ತರಗತಿ, ರಾಮಘಟ್ಟ,

ಆಟ, ಊಟಕ್ಕಿಂತ ಇಲ್ಲಿ ಕಲಿಯೋದೇ ಇಷ್ಟ. ಕಲೀತಾ ಆಡ್ಬಹುದು, ಆಡ್ತಾ ಕಲೀಬಹುದು, ಒಟ್ಟಾರೆ ನಾ ಕಲ್ತು ದೊಡ್ಡ ಆಫೀಸರ್ ಆಗ್ಬೇಕು ಸಾರ್.



**ಪಿ. ಅಂಜನಿ** *-ದನ ಕಾಯುವುದು*
6ನೇ ತರಗತಿ, ಮತ್ತಿಹಳ್ಳಿ,

ಕೆಲ್ಸಕ್ಕಿಂತ ಕಲಿಯೋದು ಒಳ್ಳೇದು ಅಂತ ಈಗ ನನ್ಗೆ ಗೊತ್ತಾಯ್ತು ಸಾರ್, ಆದ್ರೆ ಅಲ್ಲೇ ಇರೋ ಇನ್ನೂ ಕೆಲವರಿಗೆ ಗೊತ್ತೇ ಆಗಿಲ್ಲ. ಏನ್ಮಾಡೋಣ ಸಾರ್.

**ರಂಜಿತ** *-ಹೂ ಮಾರುವುದು*
7ನೇ ತರಗತಿ, ದಾವಣಗೆರೆ,

ನನ್ನ ಎಲ್ಲಾ ಪ್ರಶ್ನೆಗೂ ಇಲ್ಲಿ ಉತ್ತರ ಕೊಡ್ತಾರೆ, ಹೊಡೆದ್ರೂ ಬೈದರೂ ಪ್ರಶ್ನೆ ಕೇಳದೇ ಬಿಡಲಾರೆ.

**ಸುನಿಲ್** *-ದನ ಕಾಯುವುದು.*
4ನೇ ತರಗತಿ, ಸಿಂಗ್ರಿಹಳ್ಳಿ,

ಏನಾದ್ರೂ ದೊಡ್ಡ ವ್ಯಕ್ತಿ ಆಗ್ಬೇಕು ಸಾರ್, ಏನಾಗ್ಲಿ ಹೇಳಿ, ಹೇಗೆ ಆಗ್ಲಿ ?

**ರಘು** *-ಕೃಷಿ ಕೆಲಸ*
6ನೇ ತರಗತಿ, ಸಿಂಗ್ರಿಹಳ್ಳಿ,

ಈಗ ನಾ ತುಂಬಾ ಬದಲಾಗಿದ್ದೇನೆ, ನನ್ನ ಕಂಡ್ರೆ ಈಗ ಎಲ್ಲರಿಗೂ ಇಷ್ಟ.

**ಪಿ. ಹನುಮಂತ**

ನಾನು ಏನ್ ಮಾಡ್ಬೇಕಂತ ಗೊತ್ತಾಗಿಲ್ಲ ನೀವು ಹೇಳಿದ್ದನ್ನೆಲ್ಲ ಮಾಡ್ತೇನೆ, ನೀವು ಹೇಳೋದೇ ಸಾಕಾಗಲ್ಲ ಸಾರ್.





**ಎಚ್. ನಾಗರಾಜ**

ಇಲ್ಲಿ ಬಹಳ ಪ್ರೀತಿ ಸಿಗ್ತಾ ಇದೆ. ಅದಕ್ಕೆ ಇಲ್ಲೇ ಇರ್ಬೇಕು ಅನ್ಸುತ್ತೆ.

**ಎಂ. ನಾಗರಾಜ** *-ದನ ಕಾಯುವುದು.*
4ನೇ ತರಗತಿ, ಸಿಂಗ್ರಿಹಳ್ಳಿ,

ನನ್ನನ್ನ ಯಾರೂ ಸೋಮಾರಿ ಅಂತ ಹೇಳ್ಬಾರ್ದು, ನನಗೆ ಸಿಟ್ಟು ಬಂದ್ರೆ ಯಾವ ಕೆಲ್ಸಾನೂ ಮಾಡಲ್ಲ. ಪ್ರೀತಿಯಿಂದ ಹೇಳಿದ್ರೆ ಎಲ್ಲಾ ಮಾಡ್ತೀನಿ.

**ಗುಡ್ಡೇಶ್** *-ಗ್ಯಾರೇಜ್*
6ನೇ ತರಗತಿ, ಕಾಟೇನಹಳ್ಳಿ

ನಾನು ಕಲ್ತು ಮಿಲ್ಟ್ರಿಗೆ ಸೇರ್ಲೇಬೇಕು. ದೇಶ ಸೇವೆ ಮಾಡ್ಬೇಕಂತ ಕನಸು ಸಾರ್.



**ಎಂ. ಜಾಕಿರ್‌ಸಾಬ್** *-ಎಮ್ಮೆ ಕಾಯುವುದು*
3ನೇ ತರಗತಿ, ಮಹದೇವಪುರ,

ಚಿತ್ರ ಮಾಡೋದನ್ನು ನೋಡಿ, ನನಗೂ ಚಿತ್ರ ಮಾಡ್ಬೇಕು ಅನ್ನಿಸ್ತು. ದಿನಾ ತುಂಬಾ ಚಿತ್ರ ಮಾಡ್ತೀನಿ.

**ರುದ್ರೇಶ್** *-ಹೋಟೆಲ್*
4ನೇ ತರಗತಿ, ಮಗಾನಹಳ್ಳಿ,

ಪೆಟ್ಟು ತಿನ್ನಕಾಗ್ದೆ ಸ್ಕೂಲ್ ಬಿಟ್ಟೆ, ಇಲ್ಲಿಗೆ ಬಂದ ಮೇಲೆ ಕಲಿಯೋಕೆ ಆಸೆಯಾಗಿದೆ. ಪೆಟ್ಟು ಕೊಟ್ಟರೂ ಇನ್ನು ಕಲಿಯೋದು ಬಿಡಲ್ಲ.



**ಆಂಜನೇಯ**

ನಾ ಇಲ್ಲಿಗೆ ಮೊದ್ಲೆ ಬರಬೇಕಿತ್ತು. ಮತ್ತೆ ಹೆಚ್ಚು ಕಲೀಲಿಕ್ಕೆ ಸ್ಕೂಲಿಗೆ ಸೇರಿ ಸಾಧನೆ ಮಾಡ್ತೀನಿ.

**ಎಲ್.ಆರ್. ಕಿರಣಕುಮಾರ್**

ಅಪ್ಪ ಎಷ್ಟನೇ ತರಗತಿ ಕಲ್ತಿದಾರೆ ಅಂತಾನೇ ನನ್ಗೆ ಗೊತ್ತಿಲ್ಲ, ಅಪ್ಪಂಗೆ ಪೊಲೀಸ್ ಕೆಲ್ಸ ಬಂದಿತ್ತು ಹೋಗಿಲ್ಲ.

**ಮಂಜುನಾಥ್** *-ಕೃಷಿ ಕೆಲಸ*
5ನೇ ತರಗತಿ,

ಯಾರು ಬಯ್ದರೂ ನನಗೆ ಇಷ್ಟ ಆಗಲ್ಲ. ನನಗೆ ಪ್ರೀತಿನೇ ಬೇಕು.

**ನವೀನ್**

ಇನ್ನು ಮುಂದೆ ಯಾರು ಗುಟ್ಕಾ ತಿಂದರೂ ನಾ ತಿನ್ನಲ್ಲ ಸಾರ್, ಯಾರಿಗೆ ಬೇಕು ಕೊಳಕು ರೋಗ, ಅಲ್ವಾ ಸಾರ್.

**ಆರ್. ಶಿವಮೂರ್ತಿ** *-ದನ ಕಾಯುವುದು.*
4ನೇ ತರಗತಿ, ಮಹಾದೇವಪುರ,

ನಾ ಮತ್ತೆ ಅದೇ ಸ್ಕೂಲಿಗೆ ಹೋಗ್ತೀನಿ. ಮಿಸ್ ಕಲಿಸೋದಕ್ಕೆ ಕಲಿಯೋದಕ್ಕೆ ಹೊಡಿತಾ ಇದ್ರು. ಅದೆಲ್ಲಾ ಇಲ್ಲಿಗೆ ಬಂದ ಮೇಲೆ ಗೊತ್ತಾಯ್ತು.



ರಾಜು

ಒಂದೇ ಸಾರಿ ಹೇಳಿದ್ರೆ ಸಾಕು ನಂಗೆ, ಎರಡು ಸಾರಿ ಹಾಗೆ ಜೋರಾಗಿ ಹೇಳಿದ್ರೆ ಭಯ ಆಗ್ತದೆ.

**ರಾಜು. ಬಿ,** *-ದನ ಕಾಯುವುದು.*
6ನೇ ತರಗತಿ, ಮಗಾನಹಳ್ಳಿ,

ಇಲ್ಲೇ ಇರೋಕೆ ಇಷ್ಟ. ಎಲ್ಲ ಮಕ್ಕಳೂ ಹೀಗೆ ಇಲ್ಲೇ ಇರ್ಲಿ.ನಾನು ಇರ್ತೀನಿ.

**ತಿಪ್ಪೇಶಿ** *-ದನ ಕಾಯುವುದು*
5ನೇ ತರಗತಿ, ಹೊಸನಾಯಕನಹಳ್ಳಿ,

ಆ ಸ್ಕೂಲಲ್ಲಿ ತುಂಬಾ ಹೊಡೀತಾ ಇದ್ರು. ಮೇಷ್ಟ್ರುಗಳಿಗೆ ಹೋಡೀಲಿಕ್ಕೆ ಯಾರು ಕಲ್ಸಿದ್ರುಸಾರ್, ಎಲ್ಲಾಮಕ್ಕಳೂ ಕಲೀಬೇಕಲ್ಲ ಸಾರ್....



**ಎಂ.ಬಿ. ರಮೇಶ್** *-ಟೈಲರಿಂಗ್*
6ನೇ ತರಗತಿ, ಮಗಾನಹಳ್ಳಿ,

ಯಾರಾದ್ರೂ ಏನಾದ್ರೂ ಮಾಡ್ತಾ ಇರೋದನ್ನ ನೋಡಿದ್ರೆ, ನಾನೂ ಹಂಗೇ ಆಗ್ಬೇಕಂತ ಆಸೆ ಆಗ್ತದೆ. ನಾನು ಸಾಧನೆ ಮಾಡ್ಲೇಬೇಕು.

**ಕೋಟ್ರೇಶ್**
3ನೇ ತರಗತಿ, ಕೃಷಿ

ಬಾಯಿಗೆ ಹೆಚ್ಚು ಕೆಲ್ಸಕ್ಕಿಂತ ಕೈಗೆ ಹೆಚ್ಚು ಕೆಲ್ಸ ಬೇಕು. ನಾ ಏನಾದ್ರೂ ಮಾಡ್ತಾ ಇರ್ತೀನಿ.



**ಭರಮಪ್ಪ ಜೋಷಿ,** *-ದನ ಕಾಯುವುದು.*
4ನೇ ತರಗತಿ, ಲಿಂಗಾಪುರ,


ಬಾಳಾ ಸಾರಿ ಸ್ಕೂಲಿಗೆ ಹೋಗ್ತೀನಂತ ಅಪ್ಪಂಗೆ ಅಳ್ತಾ ಹೇಳ್ತಾ ಇದ್ದೆ. ಆದ್ರೆ ಹೋಗ್ತಿರಲಿಲ್ಲ. ನಾ ಈಗ ಚೆನ್ನಾಗಿ ಓದ್ತೇನೆ.

**ಆರ್. ಪರಶುರಾಮ** *-ಮೀನು ಹಿಡಿಯುವುದು.*
ಮಗಾನಹಳ್ಳಿ,

ಕಲಿತ್ರೆ ಬುದ್ದಿ ಬರ್ತದೆ ಸಾರ್, ಚೆನ್ನಾಗಿ ಓದಿ ಬುದ್ದಿವಂತನಾಗ್ಬೇಕು. ಛಲ ಇದ್ರೆ ಆಗ್ತದೆ. ಈಗ ತುಂಬಾ ಛಲ ಬಂದಿದೆ.

**ಹನುಮಂತ** *-ದನ ಕಾಯುವುದು.*
ಬೇವಿನಹಳ್ಳಿ,

ನಾನು ಒಳ್ಳೇನಾಗೋದಕ್ಕೆ ಓದ್ತೀನಿ, ಎಲ್ಲರೂ ಪ್ರೋತ್ಸಾಹ ನೀಡಬೇಕು.



**ಎಂ. ಮಂಜುನಾಥ** *-ಎಮ್ಮೆ ಕಾಯುವುದು.*
ಮಗಾನಹಳ್ಳಿ,

ಅಲ್ಲಿ ಚೆನ್ನಾಗಿ ಊಟ ಕೊಡ್ತಾರೆ, ಚೆನ್ನಾಗಿ ಊಟ ಕೊಡ್ತಾರೆ ಅಂತ ಹಳ್ಳೀಲಿ ಹೇಳ್ತಾ ಇದ್ದರು ಸಾರ್, ಹೌದ್ಸಾರ್ ಊಟ ಕೊಡ್ತಾರೆ, ಅದಕ್ಕಿಂತಲೂ ಕಲಿಯೋದು ಮುಖ್ಯ ಅಂತ ಈಗ ಚೆನ್ನಾಗಿ ಗೊತ್ತಾಯ್ತು ಸಾರ್.

**ಎಸ್. ಸುರೇಶ್** *- ಕೂಲಿ ಕೆಲಸ*
5ನೇ ತರಗತಿ,

ನಾನೂ ಸ್ವಂತ ಬದುಕ್ಬೇಕು ಸಾರ್. ಅದಕ್ಕೆ ಓದ್ಬೇಕು.

**ಕೆ. ಶಿವರಾಜ** *-ಮನೆಗೆಲಸ*
5ನೇ ತರಗತಿ, ಚಿತ್ರದುರ್ಗ,

ಇಲ್ಲಿ ತುಂಬಾ ಚೆನ್ನಾಗಿದೆ. ಎಲ್ಲಾ ಸ್ಕೂಲ್‌ಗಳ ಮೇಷ್ಟ್ರು ಇಂಗೇ ಇರ್ಬೇಕಿತ್ತು.





**ಬಿ. ಮಂಜುನಾಥ** *-ಕುರಿ ಕಾಯುವುದು.*
1ನೇ ತರಗತಿ, ಕುರ್ಕಿ,

ಏನು ಮಾಡಿದ್ರೂ ಸಿದ್ದಪ್ಪ ಮೇಷ್ಟ್ರು ಬಯ್ಯಲ್ಲ ಸಾರ್, ತುಂಬಾ ಒಳ್ಳೇರು. ನಾನೂ ಹಂಗೇ ಆಗ್ಬೇಕು.

**ಸದ್ದಾಂಹುಸೇನ್** *-ಕುರಿ ಕಾಯುವುದು.*
6ನೇ ತರಗತಿ, ಮಗಾನಹಳ್ಳಿ,

ಮಾಸ್ತರ ಒಂದ್ ಒಳ್ಳೇ ಮಾತಿನಿಂದ ನಾನು ನಿಜವಾಗ್ಲೂ ಬದಲಾದೆ ಸಾರ್. ಎಲ್ರಿಗೂ ಒಂದೇ ಮಾತು ಸಾಕು ಸಾರ್.

**ಟಿ.ದೇವರಾಜ** *-ದನ ಕಾಯುವುದು.*
ಮತ್ತಿಹಳ್ಳಿ, 4ನೇ ತರಗತಿ,

ಈ ಸ್ಕೂಲಲ್ಲಿ ಮೇಷ್ಟ್ರು ಹೇಳದ್ದನ್ನೆಲ್ಲ ಕೇಳ್ತೇನೆ. ಯಾಕೇಂದ್ರೆ ಅವ್ರು ಹೊಡೆಯಲ್ಲ.

**ಮಲ್ಲಿಕಾರ್ಜುನ** *-ಎಮ್ಮೆ ಕಾಯುವುದು*
3ನೇ ತರಗತಿ, ಎರೆನಾಗತಿಹಳ್ಳಿ,

ಎಮ್ಮೆ ಕಾಯೋವಾಗ ನೋಡ್ತಾ ನಿಂತು, ಶಾಲೆಗೆ ಹೋಗೋರನ್ನ ಕಂಡಾಗ ನಾನೂ ಹಂಗೇ ಸ್ಕೂಲಿಗೆ ದಿನಾ ಹೋಗ್ಬೇಕಂತ ಕನಸ್ ಕಾಣ್ತಾ ಇದ್ದೆ. ಈಗ ಅದು ನನಸಾಗಿದೆ.

**ಸಿ. ಅನಿಲ್‌ಕುಮಾರ್**

ಸ್ಕೂಲಿಗೆ ಹೋಗ್ತಿದ್ದಾಗ ತುಂಬಾ ಚೆನ್ನಾಗಿತ್ತು ಸಾರ್. ಸುಮ್ನೇ ನಮ್ಮಪ್ಪ ಕರ್ಕೊಂಡೋಗಿ ಎಮ್ಮೆ ಕಾಯೋಕೆ ಹಾಕ್ಬಿಟ್ರು ಸಾರ್.



**ಆರ್. ಪುನೀತ್** *-ಮನೆ ಕೆಲಸ*
5ನೇ ತರಗತಿ, ರಾಮಘಟ್ಟ,

ಓದ್ದೇ ಇರೋರನ್ನು ಪ್ರೀತಿಯಿಂದ ಕರೆದು ತಂದು ಓದೋಕೆ ಇಲ್ಲಿ ಹಾಕಿದ್ದೀರಿ, ನೀವೆಲ್ಲಾ ತುಂಬಾ ಒಳ್ಳೇರು ಸಾರ್.

**ಜ್ಯೋತಿಕುಮಾರ**
4ನೇ ತರಗತಿ, ದಿದ್ದಿಗೆತಾಂಡ

ಕಲಿಯುವುದೂ ಒಂದು ಕೆಲ್ಸ ಆಗ್ಬೇಕು... ಕಲಿಯುವುದಕ್ಕೂ ಸಂಬಳ ಬೇಕಿತ್ತು. ಅಪ್ಪಂಗೆ ಕುಡೀಲಿಕ್ಕೆ ಹಣ ಎಲ್ಲಿಂದ ಕೊಡೋದು?

**ಜಿ. ಬಸವರಾಜ** *-ಮನೆ ಕೆಲಸ*
4ನೇ ತರಗತಿ, ದಾವಣಗೆರೆ,

ನನ್ನನ್ನು ಇಲ್ಲಿಗೆ ಎಳ್ಕೊಂಡು ಬಂದ ಮಾಸ್ತರಿಗೆ ಥ್ಯಾಂಕ್ಸ್ ಹೇಳ್ತೀನಿ. ಅವರ್ನ ನೆನಸ್ಕತೀನಿ. ಓದಿ ಮುಂದೆ ಬರ್ತೀನಿ.



**ಎನ್. ಮಾಲತೇಶ** *-ಹೂಲಿ.*
6ನೇ ತರಗತಿ, ಎಸ್.ಎಂ.ಕೃಷ್ಣನಗರ,

ಸ್ಕೂಲಿಗೆ ಹೋಗೋ ಹುಡುಗರನ್ನು ನೋಡ್ದಾಗ ನಾನು ಅಂಗಿರಬೇಕು ಅಂತ ಅನ್ನಿಸ್ತಿತ್ತು, ಈಗ ನಾನೇ ಸ್ಕೂಲ್ ಹುಡುಗ.

**ಎಸ್. ಮಲ್ಲಿಕಾರ್ಜುನ** *-ಐಸ್ ಮಾಡುವುದು.*
6ನೇ ತರಗತಿ, ಹರಿಹರ,

ಆ ಶಾಲೇನಲ್ಲೂ ಇದೇ ತರ ಆಟ ಪಾಟ ಸಿಕ್ಕಿದ್ದಿದ್ರೆ ನಾನ್ ಆ ಶಾಲೆ ಬಿಡ್ತಿದ್ದಿಲ್ಲ ಸಾರ್.



**ಪಿ. ನಾಗರಾಜ**

ಇಲ್ಲಿ ಗುರುಗಳು ಚಲೋ ಓದಿಸ್ತಾರೆ. ನಾ ಈಗ ಬದಲಾಗಿರೋದನ್ನ ನನ್ನ ಊರವರೆಲ್ಲಾ ಹೇಳ್ತಾರೆ.

**ಎಂ. ನವೀನ್**

ಸ್ಕೂಲಿಗೆ ಹೋದ್ರೆ ಮೇಷ್ಟ್ರು ಹೊಡೀತಾರೆ, ಕೆಲಸಕ್ಕೆ ಹೋದ್ರೆ ಮಾಲೀಕರು ಹೋಡಿತಾರೆ. ಎಲ್ಲಿಗೆ ಹೋಗ್ಲಿ ಸಾರ್.

**ಮರಿಯಪ್ಪ** *-ದನ ಕಾಯುವುದು*
**ಮಗಾನಹಳ್ಳಿ,**

ನನ್ಗೆ ಓದ್ಬೇಕಂತ ಮೊದ್ಲೆ ತುಂಬಾ ಆಸೆ ಇತ್ತು ಸಾರ್, ಅಪ್ಪ ಅಮ್ಮ ಇಬ್ರೂ ಕುಡುಕ್ರು. ನಾ ಏನ್ಸಾರ್ ಕಲಿಯೋದು ? ಈ ಯುನಿಸೆಫ್ ಬಾಲಕಾರ್ಮಿಕ ಶಾಲೆ ನನ್ನ ಕಲಿಯುವ ಹಾಗೆ ಮಾಡ್ತು.

**ಬಿ.ಟಿ.ಪರಶುರಾಮ** *-ಕುರಿ ಕಾಯುವುದು.*
5ನೇ ತರಗತಿ, ಕುರ್ಕಿ ಬುಳ್ಳಾಪುರ,

ಮನೇಲಿ ಇದ್ದಿದ್ರೆ ಈಗ್ಲೂ ಅಪ್ಪ ಅಮ್ಮ ಕುರಿಕಾಯಿಸ್ತಿದ್ರು. ಅಲ್ಲಿ ಇದ್ದಾಗ ಅದೇ ಸುಖ, ಇಲ್ಲಿ ಇದ್ದಾಗ ಇದೇ ಸುಖ ಅಲ್ವಾ ಸಾರ್.



**ಚಂದ್ರಪ್ಪ** *-ದನ ಕಾಯುವುದು*
6ನೇ ತರಗತಿ,

ಸ್ಕೂಲಲ್ಲಿ ಮೇಷ್ಟ್ರು ಒಳ್ಳೇರು ಇರ್ಬೇಕು. ಹಂಗಾದ್ರೆ ಎಲ್ರೂ ಸ್ಕೂಲಿಗೆ ಹೋಗ್ತಾರೆ.

**ಸಿ.ಮಂಜುನಾಥ** *-ಕಟ್ಟಿಗೆ ಒಡೆಯುವುದು.*
6ನೇ ತರಗತಿ, ಶಿವನಗರ,

ನನಗೆ ಕುಡಿಯದಿರೋ ಅಪ್ಪ ಇರಬೇಕಾಗಿತ್ತು.

**ಅಮಿತ್** -*ಬೀಜ ಆರಿಸುವುದು*
3ನೇ ತರಗತಿ,

ನಾನು ಎಲ್ಲಾ ಮೇಷ್ಟ್ರುನ್ನ ಮುಟ್ತೀನೆ. ಅವರೂ ನನ್ನನ್ನು ಮುಟ್ತಾರೆ.

**ಬಿ. ಸತೀಶ್** -*ದನಕಾಯುವುದು*
ಬೇವಿನಹಳ್ಳಿ,

ನಮ್ಮ ಪಾಡಿಗೆ ನಾವು, ಮೇಷ್ಟ್ರು ಪಾಡಿಗೆ ಮೇಷ್ಟ್ರು ಇದ್ರು, ತರಗತೀಲಿ ನಮ್ಮನ್ನ ಕೇಳೋರೆ ಇರ್ಲಿಲ್ಲ. ಅದ್ಕೆ ನಮ್ಮಪ್ಪ ಕೆಲ್ಸಕ್ಕೆ ಹಾಕ್ದ ಸಾರ್.

**ಬಿ. ಬಸವರಾಜ ಬೇವಿನಹಳ್ಳಿ**
**ದನ ಕಾಯುವುದು.**

ಯಾರು ನೋಡಿದ್ರೂ ಹೋಡಿಯೋರೆ ಸಾರ್, ಪ್ರೀತಿಯಿಂದ ಹೇಳೋದು ಗೊತ್ತೆ ಇಲ್ವಾ ? ಇಲ್ಲೇ ಆ ಪ್ರೀತಿ ನೋಡಿದ್ದು.





**ಹರೀಶ್** -*ಕಬ್ಬಳ*
ಮೇಕೆ ಕಾಯುವುದು.

ಇಲ್ಲಿ ತುಂಬಾನೇ ಸಂತೋಷವಾಗಿದೆ. ಅಪ್ಪ ಮನೆಗೆ ಮತ್ತೆ ಕರೀತಾರೇನೋ ಅನ್ನೋ ಭಯ ಸಾರ್, ಈ ಮಾಲೀಕರಿಗೂ ಗೊತ್ತಾಗಲ್ವಾ ಅವರ ಕೆಲ್ಸಕ್ಕೆ ನಮ್ಮನ್ನ ಕರಿತಾರಲ್ಲ. ಅವರ ಮಕ್ಕಳನ್ನ ಮಾತ್ರ ಯಾಕೆ ಸಾರ್, ಸ್ಕೂಲಿಗೆ ಹಾಕ್ತಾರೆ.

**ಕೆ.ಬಿ. ಮಾರುತಿ** -*ಕೃಷಿ*
4ನೇ ತರಗತಿ, ಹಳೇ ಕುಂದುವಾಡ,

ನನ್ನಪ್ಪನ್ನ ಅವರಪ್ಪ ಸ್ಕೂಲಿಗೆ ಸೇರಿಸಿದ್ದರೆ ನನ್ನನ್ನು ನಮ್ಮಪ್ಪ ಚೆನ್ನಾಗಿ ಕಲಿಯಲು ಬಿಡುತ್ತಿದ್ದ. ಅವನೇ ಓದ್ಲಿಲ್ಲವಲ್ಲ, ನನ್ನೇನು ಓದುಸ್ತಾನೆ.



# ಕಮರಿದ ಬಾಲ್ಯ

ಇದುವೆ ಕಥೆಯಯ್ಯಾ
ಬಡವರ ಒಡಲಾಳದ
ಎಳೆಯ ಕರುಳ ಕುಡಿಗಳು
ಸುಡು ಸುಡು ಬಾಣಲಿಯಲಿ
ಬೇಯುತಿಹ ವ್ಯಥೆಯಾ ಕಥೆಯು ||

ಅದು ದೇವನಗರಿಯ ಮಂಡಕ್ಕಿ ಭಟ್ಟಿ
ಸುಡುವ ಟೈರು, ಬೆಂಕಿಯ ಜ್ವಾಲೆ
ಹೊರ ಚಿಮ್ಮುವ ಧಗ ಧಗ ಹೊಗೆ
ಬೆಳೆದ ಹಸಿರು ಗಿಡ ಮರ ಬಳ್ಳಿಗಳು
ಉಸಿರಾಡುವ ಮೈಮನಗಳೆಲ್ಲಾ ವಿಷಾನಿಲ ||

ಕಮರಿ ಕತ್ತಲೆಯಾದ
ಎಳೆಯ ಕಂದಮ್ಮಗಳ ಬಾಲ್ಯ
ಆಟ ಪಾಠಗಳರಿವಿಲ್ಲ
ಕುಣಿದು ಕುಪ್ಪಳಿಸುವ ಪರಿವೇ ಇಲ್ಲ ||

ಸುಂದರ ಶಾಲೆಗಳ ಕನಸಿಗೆ,
ದಿನವಿಡೀ ಉರಿವ ಬೆಂಕಿಯ ಜ್ವಾಲೆಯ ಕಾವು
ಕಿತ್ತು ತಿನ್ನುವ ಬಡತನದ ಬೇಗೆಗೆ
ಬಲಿಯಾದ ಎಳೆಯ ಬಾಲ್ಯ ||



ನಾಲ್ಕು ಬಿಡಿಗಾಸಿಗಾಗಿ
ಬಡತನದ ಶಾಪದ ನೆಪ
ದುಡಿಮೆಯ ಪಾಪದ ಕೂಪ
ಅವರ ಪಾಲಿಗದುವೇ ನಂದಿದ ದೀಪ ||

ಎಡೆ ಬಿಡದೆ ದುಡಿಸುವ ಮಾಲೀಕರು,
ಪುಡಿಗಾಸಿನ ಆಸೆಯ ತೋರಿ
ಕೆಲಸ ಕೊಟ್ಟೆವೆಂದು ಬೀಗುತಲಿಹರು
ಅವರ ಮರುಳ ಮಾತಿಗೆ ಕೈಮುಗಿವ ಬಡ ಜೀವಗಳ ||

ಮಕ್ಕಳನೆತ್ತು ಹೊತ್ತು ಲಾಲನೆ-ಪಾಲನೆ ಮಾಡಿದವರು
ಮಂಪರಿನಲ್ಲಿ ಮತ್ತೇರಿ ಮಂಕಾಗಿಹರು
ನಾಳೆಯನರಿಯದ ಹಸುಳೆಗಳು ಅರಳುವ ಮುನ್ನವೆ ಚಿವುಟಿ
ಭವಿಷ್ಯದ ಬದುಕನ್ನೇ ಬರಡಾಗಿಸಿಹರು ||

ದಿನವಿಡೀ ದುಡಿಯುವ
ಎಳೆಯ ಕರುಳ ಬಳ್ಳಿಗಳು...
ಕಾದಿವೆ... ಹುಡುಕುತಲಿವೇ...
ಶೂನ್ಯ ಕಣ್ಣ ನೋಳಗಿನಾ....
ಹೊಂಗನಸ ನನಸಾಗಿಸುವ ಕೈಗಳಿಗಾಗಿ ||

ಜಿ. ಎ. ಜಗದೀಶ್.
ಪೊಲೀಸ್ ವೃತ್ತ ನಿರೀಕ್ಷಕರು
ದಾವಣಗೆರೆ.